
ಕಲ್ಯಾಣ ಕಿರಣ

ಜನವರಿ-2011

ಬೆಲೆ-ರೂ.10





ಧಾರವಾಡದಲ್ಲಿ ಲಿಂಗಾಯತ ಧರ್ಮ ಜಾಗೃತಿ ರ್‍ಯಾಲಿಗೆ ಚಾಲನೆ ನೀಡುತ್ತಿರುವಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ ಮತ್ತು ರಾಷ್ಟ್ರೀಯ ಬಸವ ದಳದ ಶರಣ ಶರಣೆಯರು



ಧಾರವಾಡದಲ್ಲಿ ಲಿಂಗಾಯತ ಧರ್ಮ ಜಾಗೃತಿ ಸಮಾವೇಶವನ್ನು ಉದ್ಘಾಟಿಸುತ್ತಿರುವ ಪೂಜ್ಯ ಮಾತಾಜಿ

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||
866666

ಸಂಪುಟ-41	ಬಸವ ಶಕೆ -877	ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-01	ಜನವರಿ - 2011	ವಾರ್ಷಿಕ ಚಂದಾ 100 ರೂ.

2011ರ ಜನಗಣತಿ

ಶರಣ ಬಂಧುಗಳಲ್ಲಿ ಬಿನ್ನಹ

ಹತ್ತು ವರ್ಷಗಳಿಗೊಮ್ಮೆ ನಡೆಯುವ ಜನಗಣತಿ ಇದೇ 2011ರ ಫೆಬ್ರವರಿ 8ರಿಂದ ಆರಂಭ. ಲಿಂಗಾಯತ ಧರ್ಮೀಯರು ಜವಾಬ್ದಾರಿಯಿಂದ, ತಿಳುವಳಿಕೆಯಿಂದ ವರ್ತಿಸಿರಿ. ಈ ಸಲ ಹಿಂದಿನ ವರ್ಷದಂತೆ H.M. ಎಂದು ಸಂಕೇತಾಕ್ಷರ ಕೊಡದೆ ಮಾನ್ಯತೆ ಪಡೆದ ಧರ್ಮಗಳಿಗೆ ಸಂಖ್ಯೆಯನ್ನು ಕೊಡಲಾಗಿದೆ. ಜನಗಣತಿಯ ಪರಿಪತ್ರ(ಫಾರಂ)ದಲ್ಲಿ 7ನೆಯ ಅಂಕಣ (Column.) ಧರ್ಮ (Religion.). ಹಿಂದು -1, ಮುಸ್ಲಿಂ-2, ಕ್ರೈಸ್ತ -3, ಸಿಖ್ -4, ಬೌದ್ಧ-5, ಜೈನ್- 6 ಹೀಗೆ ಆರು ಧರ್ಮಗಳಿಗೆ ಸಂಖ್ಯೆ ನೀಡಲಾಗಿದೆ. ಇತರರಿಗೆ ಅವರ ಧರ್ಮದ ಹೆಸರನ್ನು ಪೂರ್ತಿಯಾಗಿ ಬರೆಯಲು ಅನುಮತಿ ನೀಡಲಾಗಿದೆ.

ಆದ್ದರಿಂದ ಲಿಂಗಾಯತ ಧರ್ಮೀಯರು ಧರ್ಮ (7) ಕಾಲಂದಲ್ಲಿ ಲಿಂಗಾಯತ ಎಂದು ಬರೆಸಿರಿ. ನಿಮ್ಮ ಉಪಜಾತಿಗಳನ್ನಾಗಲಿ, ಹಿಂದು, ಹಿಂದು ಲಿಂಗಾಯತ, ವೀರಶೈವ, ವೀರಶೈವ ಲಿಂಗಾಯತ ಎಂದೆಲ್ಲ ಬರೆಸಲು ಹೋಗಬೇಡಿರಿ. ಜನವರಿ, ಫೆಬ್ರವರಿ ತಿಂಗಳಲ್ಲಿ ಚೆನ್ನಾಗಿ ಪ್ರಚಾರ ಮಾಡಿರಿ. ಕರಪತ್ರ ಮುದ್ರಿಸಿ ಹಂಚಿರಿ. 500 ಪೈಸೆ ಪೋಸ್ಟ್ ಕಾರ್ಡ್ ತೆಗೆದುಕೊಂಡು ಅದರಲ್ಲಿ ಜನಗಣತಿಯ ಧರ್ಮ (7) ಕಾಲಂದಲ್ಲಿ ಕೇವಲ ಲಿಂಗಾಯತ ಎಂದು ಬರೆಸಿರಿ ಎಂದು ಬರೆದು, ಕೆಳಗೆ ನಿಮ್ಮ ವಿಳಾಸ ಬರೆದು ನಿಮ್ಮ ಬಂಧು ಮಿತ್ರರು, ಪರಿಚಿತರಿಗೆ ಪೋಸ್ಟ್ ಮಾಡಿರಿ.

ಬೆಂಗಳೂರು ನಗರದ ಬನಪ್ಪ ಪಾರ್ಕಿನಲ್ಲಿ
(ಕಾವೇರಿ ಭವನದ ಎದುರು, ಕೆಂಪೇಗೌಡ ರಸ್ತೆ)
ಲಿಂಗಾಯತ ಧರ್ಮ ಜಾಗೃತಿ ಸಮಾವೇಶ

ದಿ. 25-1-2011 ರಂದು ಬೆಳಿಗ್ಗೆ 10-30ಕ್ಕೆ ಏರ್ಪಡಿಸಲಾಗಿದೆ. ಮೊದಲು ಸಭೆ, ನಂತರ ಪಾದಯಾತ್ರೆಯಲ್ಲಿ ಸಾಗಿ, ಮುಖ್ಯಮಂತ್ರಿಗಳಿಗೆ ಮನವಿ ಕೊಡಲಾಗುವುದು.

ಲಿಂಗಾಯತ ಧರ್ಮದ ಅಳಿವು -ಉಳಿವಿನ ಪ್ರಶ್ನೆ ಇದು. ಆದ್ದರಿಂದ ಬೆಂಗಳೂರು ನಗರ, ಸುತ್ತಮುತ್ತಲಿನ ಊರುಗಳವರಲ್ಲದೆ ಕರ್ನಾಟಕದ ಎಲ್ಲ ಜಿಲ್ಲೆಗಳಿಂದ ಬಸವ ತತ್ತ್ವಾಭಿಮಾನಿ ಲಿಂಗಾಯತರು ಮತ್ತು ಲಿಂಗಾಯತೇತರರು ಎಲ್ಲರೂ ಪಾಲ್ಗೊಳ್ಳಿರಿ.

(ವಿ.ಸೂ. ಅತ್ಯಂತ ಕಡಿಮೆ ಸಮಯದಲ್ಲಿ ಏರ್ಪಾಡಾದ ಕಾರ್ಯಕ್ರಮವಿದಾಗಿದೆ. ಹೀಗಾಗಿ ಶರಣ ಬಂಧುಗಳು ಬೇರೆ ಕಡೆ ಸ್ನಾನ ಪೂಜೆ ಉಪಾಹಾರ ಮುಗಿಸಿಕೊಂಡು ಬನಪ್ಪ ಪಾರ್ಕ್‌ನಲ್ಲಿ ನಡೆಯುವ ಸಭೆಯಲ್ಲಿ ಪಾಲ್ಗೊಳ್ಳಿರಿ. ಕಾರ್ಯಕ್ರಮದ ನಂತರ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಲಾಗಿದೆ.)

ಪೂಜ್ಯ ಶ್ರೀಮನ್ನಿರಂಜನ ಮಹಾಜಗದ್ಗುರು
ಮಾತೆ ಮಹಾದೇವಿಯವರು
ಸಂಚಾಲಕರು, ಬಸವ ತತ್ತ್ವಾಭಿಮಾನಿಗಳ ಒಕ್ಕೂಟ

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ನಾಡಿನ ಸಮಸ್ತ ಶರಣ ಬಂಧುಗಳಿಗೆ ಹೊಸ ವರ್ಷದ ಹಾರ್ದಿಕ ಶುಭಾಷಯಗಳು

- ಸಂಪಾದಕರು

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10. Ph: 8970898205, 7760627640, 8892912123

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಬೆಂಗಳೂರು ನಗರದ ಬನಪ್ಪ ಪಾರ್ಕಿನಲ್ಲಿ

(ಕಾವೇರಿ ಭವನದ ಎದುರು, ಕೆಂಪೇಗೌಡ ರಸ್ತೆ)

ಲಿಂಗಾಯತ ಧರ್ಮ ಜಾಗೃತಿ ಸಮಾವೇಶ

ಮಂಗಳ(ಬಸವ)ವಾರ, ದಿ.25-01-2011ರಂದು

ಬೆಳಿಗ್ಗೆ 10-30ರಿಂದ

ಶರಣ ಬಂಧುಗಳಲ್ಲಿ,

ಸವಿನಯ ಪ್ರಾರ್ಥನೆ. 12ನೆಯ ಶತಮಾನದಲ್ಲಿ ಗುರು ಬಸವಣ್ಣನವರಿಂದ ಸ್ಥಾಪಿತವಾದ ಲಿಂಗಾಯತ ಧರ್ಮವು ಒಂದು ಸ್ವತಂತ್ರ, ಸ್ವಾವಲಂಬಿ, ಪರಿಪೂರ್ಣ ಧರ್ಮ. ಇದು ಹಿಂದುದೊಳಗಣ ಒಂದು ಜಾತಿಯಲ್ಲ, ಕೇವಲ ಮತವಲ್ಲ, ಪಂಥವಲ್ಲ. ಬ್ರಿಟಿಷ್ ಸರ್ಕಾರವು ನಡೆಸಿದ ಜನಗಣತಿಗಳಲ್ಲಿ ಸ್ವತಂತ್ರ ಧರ್ಮವಾಗಿಯೇ ಉಲ್ಲೇಖವಾಗಿದೆ. ಯಾವ ಯಾವ ಗುಣಲಕ್ಷಣ ಸ್ವರೂಪಗಳಿಂದ ಜೈನ, ಬೌದ್ಧ ಮತ್ತು ಸಿಖ್ ಧರ್ಮಗಳು ಸ್ವತಂತ್ರ ಧರ್ಮಗಳಾಗಿ ಉಲ್ಲೇಖವಾಗಿವೆಯೋ ಅದೇ ಗುಣ, ಲಕ್ಷಣ, ಸ್ವರೂಪದಿಂದ ಲಿಂಗಾಯತವೂ ಸ್ವತಂತ್ರ ಅವೈದಿಕ ಧರ್ಮವಾಗಿದೆ. ಭಾರತದಲ್ಲಿಯೇ ಹುಟ್ಟಿರುವ ಈ ಮೂರು ಧರ್ಮಗಳು ಸ್ವತಂತ್ರ ಧರ್ಮಗಳ ಸಂವಿಧಾನಾತ್ಮಕ ಮಾನ್ಯತೆ ಪಡೆದಿರುವುದಲ್ಲದೆ ಅಲ್ಪ ಸಂಖ್ಯಾತ ಧರ್ಮಗಳ ಸ್ಥಾನಮಾನ, ಸವಲತ್ತು ಪಡೆದಿವೆ. ಲಿಂಗಾಯತರಲ್ಲಿ ತಮ್ಮದು ಸ್ವತಂತ್ರ ಧರ್ಮ ಎಂಬ ಅರಿವು ಇಲ್ಲದಿರುವುದು, ಸಂಘ - ಸಂಸ್ಥೆಗಳಲ್ಲಿ ಪರಸ್ಪರ ಸಾಮರಸ್ಯ, ಒಗ್ಗಟ್ಟು ಇಲ್ಲದಿರುವುದು, ಕೆಲವು ಜನರ ಸಂಕುಚಿತ ನಿಲುವು, ವ್ಯವಸ್ಥಿತವಾದ ಹೋರಾಟ ಮಾಡದೆ ಇರುವುದು ಈ ಲೋಪಕ್ಕೆ ಕಾರಣ.

1. 2011ನೆಯ ಇಸವಿಯಲ್ಲಿ ಕೇಂದ್ರ ಸರ್ಕಾರ ನಡೆಸುವ ಜನಗಣತಿಯಲ್ಲಿ, ಜನಗಣತಿ ಫಾರ್ಮಿನ ಧರ್ಮ ಕಾಲಂದಲ್ಲಿ ಲಿಂಗಾಯತರು ಕೇವಲ ಲಿಂಗಾಯತ ಎಂದು ಬರೆಸಬೇಕೇ ವಿನಾ ಹಿಂದು, ಹಿಂದು ಲಿಂಗಾಯತ, ವೀರಶೈವ, ವೀರಶೈವ ಲಿಂಗಾಯತ ಎಂದಾಗಲಿ, ತಮ್ಮ ಉಪಜಾತಿಯನ್ನಾಗಲಿ ಬರೆಸಬಾರದು. ಈ ಬಗ್ಗೆ ತೀವ್ರವಾಗಿ ಜನಜಾಗೃತಿಯನ್ನು ಮಾಡುವುದು ಅವಶ್ಯವಿದೆ.

2. ಲಿಂಗಾಯತ ಮತ್ತು ವೀರಶೈವ ಬೇರೆ ಬೇರೆ. ಲಿಂಗಾಯತವು ಒಂದು ಸ್ವತಂತ್ರ ಧರ್ಮ, ವಚನ ಶಾಸ್ತ್ರ ಆಧಾರಿತವಾಗಿದೆ. ವೀರಶೈವವು ಬಸವ ಪೂರ್ವದ ಒಂದು ಶೈವ ಪಂಥ, ವರ್ಣಾಶ್ರಮ ಆಧಾರಿತವಾದ ಸಾಮಾಜಿಕ ವ್ಯವಸ್ಥೆಯುಳ್ಳದು. ಕರ್ನಾಟಕ, ಮಹಾರಾಷ್ಟ್ರ ಎಲ್ಲೆಡೆ ಇಷ್ಟಲಿಂಗಧಾರಿಗಳ ಈ ಸಮಾಜಕ್ಕೆ ಲಿಂಗಾಯತವೆಂದೇ ತಿಳಿಯಲಾಗುತ್ತಿದೆ. ಅಶಿಕ್ಷಿತ

ಲಿಂಗಾಯತರು ಸಹ ನೀವಾರು ಎಂದಾಗ ನಾವು ಲಿಂಗಾಯತರು ಎಂದೇ ಹೇಳುತ್ತಾರೆ. ಹೀಗಿರುವಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆ ಎಂಬ ಸಂಸ್ಥೆಯನ್ನು ಹುಟ್ಟು ಹಾಕಿ. ಶ್ರೀ ಹಾನಗಲ್ ಕುಮಾರ ಸ್ವಾಮಿಗಳು ಇಷ್ಟಲಿಂಗಧಾರಿ ಲಿಂಗಾಯತರಲ್ಲಿ ವೀರಶೈವರು ಎಂಬ ಭ್ರಮೆ ಹುಟ್ಟಿಸಿದರು. ಗೋಳಾಕಾರದ ಇಷ್ಟಲಿಂಗವನ್ನು ಧರಿಸುವವರೆಲ್ಲರೂ ಲಿಂಗಾಯತರೇ ವಿನಾ ವೀರಶೈವರಲ್ಲ. ಚತುರ್ವರ್ಣ ವ್ಯವಸ್ಥೆಯನ್ನು ನಂಬುವ ವೀರಶೈವರಲ್ಲಿ ಶೂದ್ರ ವೀರಶೈವರು ಕೇರಳದಲ್ಲಿದ್ದು ಅವರು ಮಾಂಸಾಹಾರಿಗಳು. ಕರ್ನಾಟಕದ ಲಿಂಗಾಯತವು ಶುದ್ಧ ಸಸ್ಯಾಹಾರಿ ಧರ್ಮ. ಲಿಂಗಾಯತರು ಶವಗಳನ್ನು ಹೂಳುತ್ತಾರೆ. ಕರ್ನಾಟಕದ ಹೊರಗಿನ ರಾಜ್ಯಗಳಲ್ಲಿರುವ ವೀರಶೈವರು ಶವವನ್ನು ದಹನ ಮಾಡುತ್ತಾರೆ. ವೀರಶೈವವು ಹಿಂದು ಧರ್ಮದ ಅಂಗ. ಹಿಂದು ಧರ್ಮದಲ್ಲಿ ಎರಡು ಪ್ರಮುಖ ವಾಹಿನಿಗಳು ವೈದಿಕ ಮತ್ತು ಆಗಮಿಕ ; ಭಕ್ತಿ ಪರಂಪರೆಗಳು ವೈಷ್ಣವ ಮತ್ತು ಶೈವ. ಶೈವದಲ್ಲಿ ಹಲವಾರು ಪಂಥಗಳಿವೆ. ಸಪ್ತ ಶೈವದಲ್ಲಿ ಒಂದು ಪಂಥ ವೀರಶೈವ. ವೀರಶೈವವು ಆಗಮೋಕ್ತ; ಲಿಂಗಾಯತವು ವಚನೋಕ್ತ. ವೀರಶೈವವು ಶಿವೋಪಾಸಕ ಪಂಥ. ಲಿಂಗಾಯತವು ಸೃಷ್ಟಿಕರ್ತ ಲಿಂಗದೇವನನ್ನು ಏಕ ನಿಷ್ಠೆಯಿಂದ ಆರಾಧಿಸುವ ಧರ್ಮ. ಇನ್ನೂ ಹಲವಾರು ವ್ಯತ್ಯಾಸಗಳಿವೆ. ಆಂಧ್ರ ವೀರಶೈವದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ವೀರಶೈವರೆಂಬ ವಿಂಗಡಣೆ ಇದೆ. ಅಸ್ಪೃಶ್ಯರಿಗೆ ದೀಕ್ಷೆ ನಿಷಿದ್ಧವಿದೆ. ಲಿಂಗಾಯತ ಧರ್ಮವು ಎಲ್ಲರಿಗೂ ಸಮಾನ ಅವಕಾಶ ನೀಡುತ್ತದೆ. ಲಿಂಗಾಯತರು ತಮ್ಮನ್ನು ವೀರಶೈವರೆಂದು ಕರೆದುಕೊಳ್ಳುವುದು, ದಾಖಲಿಸುವುದು ತಮ್ಮ ಧರ್ಮಕ್ಕೆ ಮಾಡುವ ಅಪಚಾರವಾಗುತ್ತದೆ. ಜನಗಣತಿಯ ಫಾರ್ಮಿನಲ್ಲಿ 7ನೇ ಕಾಲಂ ಧರ್ಮ(Religion) ಎಂಬ ಅಂಕಣ (Column) ಇರುತ್ತದೆ. ಇದರಲ್ಲಿ ಕ್ರಮವಾಗಿ ಹಿಂದು -1, ಮುಸ್ಲಿಂ-2, ಕ್ರೈಸ್ತ-3, ಸಿಖ್-4, ಬೌದ್ಧ-5, ಜೈನ-6.

ಹೀಗೆ 6 ಧರ್ಮಗಳನ್ನು ಹೆಸರಿಸಿ ಕ್ರಮಸಂಖ್ಯೆ ಕೊಡಲಾಗಿದೆ ಮತ್ತು ಇತರ ಧರ್ಮೀಯರು ತಮ್ಮ ಧರ್ಮದ ಹೆಸರು ಪೂರ್ತಿಯಾಗಿ ಬರೆಸಬೇಕು. ಆದ್ದರಿಂದ ಲಿಂಗಾಯತರು ತಮ್ಮ ಧರ್ಮ ಲಿಂಗಾಯತ ಎಂದು ಬರೆಸಬೇಕೇ ವಿನಾ ಹಿಂದು ಲಿಂಗಾಯತ, ವೀರಶೈವ ಲಿಂಗಾಯತ, ವೀರಶೈವ, ಹಿಂದು ವೀರಶೈವ ಎಂದಾಗಲಿ, ತಮ್ಮ ಉಪಜಾತಿಯನ್ನಾಗಲಿ ಬರೆಸಬಾರದು.

3. ಅಖಿಲ ಭಾರತ ವೀರಶೈವ ಮಹಾಸಭೆಯವರು ಈ ವಿಷಯದಲ್ಲಿ ಜನರನ್ನು ದಿಕ್ಕು ತಪ್ಪಿಸುತ್ತಿದ್ದು ವೀರಶೈವ ಅಥವಾ ಲಿಂಗಾಯತ, ವೀರಶೈವ ಲಿಂಗಾಯತ ಯಾವುದನ್ನಾದರೂ ಬರೆಸಿ ಎಂದು ಪ್ರಚಾರ ಮಾಡುತ್ತಿದ್ದಾರೆ. ಒಂದು ಧರ್ಮಕ್ಕೆ, ಒಂದೇ ಹೆಸರಿರುವುದೇ ವಿನಾ ಹಲವಾರು ಹೆಸರು ಇರುವುದಿಲ್ಲ. ಆದ್ದರಿಂದ 'ಲಿಂಗಾಯತ' ಎಂದು ಮಾತ್ರ ಬರೆಸಬೇಕು.

4. ಕರ್ನಾಟಕ ಸರ್ಕಾರ ಒಂದು ಪ್ರಮಾದವನ್ನು ಎಸಗುತ್ತಿದೆ. ತಹಸೀಲ್ದಾರರಲ್ಲಿ ಜಾತಿ ಪ್ರಮಾಣಪತ್ರ ಬೇಕೆಂದು ಲಿಂಗಾಯತರು ಅರ್ಜಿ ಸಲ್ಲಿಸಿದರೆ ಅವರಿಗೆ ಎಲ್ಲರಿಗೂ ವೀರಶೈವ ಲಿಂಗಾಯತ ಎಂದು ಜಾತಿ ಪ್ರಮಾಣ ಪತ್ರವನ್ನು ತಹಸೀಲ್ದಾರರು ನೀಡುತ್ತಾರೆ. ಲಿಂಗಾಯತ ಸಮಾಜದಲ್ಲಿ ಎಲ್ಲ ಲಿಂಗಾಯತರೂ ವೀರಶೈವ ಲಿಂಗಾಯತರಲ್ಲ. ಹಲವಾರು ಒಳಪಂಗಡ

ಗಳವರು ಇಲ್ಲಿ ಉಂಟಲ್ಲವೆ ? ಹೀಗೇಕೆ ಎಂದರೆ ತಹಸೀಲ್ದಾರರು ಆ ರೀತಿ ಕರ್ನಾಟಕ ಸರ್ಕಾರದ ಸುತ್ತೋಲೆ ಇದೆ ಎಂದು ತೋರಿಸುತ್ತಾರೆ. ಸಕಿ/225/ಬಿಸಿಎ/2000, ಬೆಂಗಳೂರು ದಿ.30-03-2002 ಹಾಗೂ ಎಸ್‌ಡಬ್ಲ್ಯೂಡಿ/126/ಬಿಸಿಎ/2002, ಬೆಂಗಳೂರು ದಿ.13-02-2003. ಇಂಥ ಸುತ್ತೋಲೆ ದುರುದ್ದೇಶದಿಂದ ಕೂಡಿರುವುದಾಗಿದೆ ಎಂದು ಹೇಳದೆ ಗತ್ಯಂತರವಿಲ್ಲ. ಅದನ್ನು ರದ್ದು ಮಾಡಲು ಸರ್ಕಾರವನ್ನು ಆಗ್ರಹಿಸಬೇಕಾಗಿದೆ.

ಕೆಲವು ಜನರಲ್ಲಿ ಒಂದು ಸಂದೇಹವಿದೆ. ಲಿಂಗಾಯತರಲ್ಲಿನ ಕೆಲವು ಉಪಜಾತಿಗಳವರಿಗೆ ರಾಜ್ಯದಲ್ಲಿ ಕೆಲವು ಸವಲತ್ತುಗಳಿವೆ. ಜನಗಣತಿಯಲ್ಲಿ ಲಿಂಗಾಯತ ಎಂದು ಬರೆಸಿದರೆ ಆ ಸವಲತ್ತು ಕೈ ತಪ್ಪಬಹುದೆ ? ಕೇಂದ್ರ ಸರ್ಕಾರದ ಈ ಜನಗಣತಿಯ ಮಾಹಿತಿಯನ್ನು ಗೋಪ್ಯವಾಗಿ ಇಡಲಾಗುವುದು. ಅದಕ್ಕೂ ರಾಜ್ಯ ಸರ್ಕಾರದ ಸವಲತ್ತಿಗೂ ಸಂಬಂಧವಿಲ್ಲ. ಯಾವ ಧರ್ಮಾನುಯಾಯಿಗಳು ಭಾರತದಲ್ಲಿ ಎಷ್ಟು ಜನರಿದ್ದಾರೆ ಎಂದು ತಿಳಿಯುವುದು ಮಾತ್ರ ಈ ಧರ್ಮಾವಾರು ಜನಗಣತಿಯ ಉದ್ದೇಶ.

5. ಕಳೆದ 2001ರ ಜನಗಣತಿಯಲ್ಲಿ ವೀರಶೈವ/ಲಿಂಗಾಯತರು ಎಂದು ಉಭಯತರನ್ನು ಕೂಡಿಸಿ ಸಂಖ್ಯೆ ತೆಗೆಯಲಾಗಿದೆ. ನಮಗೆ ಪ್ರತ್ಯೇಕವಾಗಿ ಲಿಂಗಾಯತರ ಲೆಕ್ಕ ಸಿಗಬೇಕು. ಈ ದಿಶೆಯಲ್ಲಿ ಪತ್ರ ವ್ಯವಹಾರ ಮಾಡಿದಾಗ ವೀರಶೈವ ಮಹಾಸಭೆಯವರು ಮತ್ತು ಕೆಲವು ವೀರಶೈವ ಗಣ್ಯರು ಜನಗಣತಿ ಕಮೀಷನರ್ ಅವರನ್ನು ದೆಹಲಿಯಲ್ಲಿ ಕಂಡು ಜನರು ವೀರಶೈವರೆಂದೇ ಬರೆಸಲಿ, ಲಿಂಗಾಯತರೆಂದೇ ಬರೆಸಲಿ ಎರಡೂ ಸೇರಿ ವೀರಶೈವ ಲಿಂಗಾಯತ ಎಂದೇ ಲೆಕ್ಕ ಮಾಡಬೇಕೆಂದು ಮನವಿ ಸಲ್ಲಿಸಿದ್ದಾರೆಂದು, ಇದನ್ನು ಜನಗಣತಿ ಕಮೀಷನರ್ ಒಪ್ಪಿಕೊಂಡಿದ್ದಾರೆಂದು ವೀರಶೈವ ಮಹಾಸಭೆಯವರು ಸುದ್ದಿ ಮಾಡಿದ್ದಾರೆ. ಇದನ್ನು ಪ್ರತಿಭಟಿಸಲೇ ಬೇಕು. ಆಂಧ್ರ, ತಮಿಳುನಾಡು, ಕೇರಳದ ವೀರಶೈವರು ಹಿಂದು (ವೀರಶೈವ) ಎಂದೇ ಬರೆಸುತ್ತಾರೆ. ಕರ್ನಾಟಕದ ಲಿಂಗಾಯತರು ವೀರಶೈವರೇ ಅಲ್ಲ. ಇವರು ಹಿಂದು ಧರ್ಮದ ಅಂಗವಲ್ಲ. ಆದ್ದರಿಂದ ಲಿಂಗಾಯತ ಸಮುದಾಯದ ಗಣತಿ ಪ್ರತ್ಯೇಕವಾಗಿ ಆಗಬೇಕು. ಈ ದಿಶೆಯಲ್ಲಿ ಜನಗಣತಿ ಆಯುಕ್ತರಿಗೆ ಮನವಿ ಸಲ್ಲಿಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಸಮಾನ ಮನಸ್ಕ ಮಠಾಧೀಶರ ನೇತೃತ್ವದಲ್ಲಿ ಅನೇಕ ಕಡೆ ಜಾಗೃತಿ ಸಭೆಗಳನ್ನು ಕರೆಯಲಾಗಿದೆ. ಕಾರ್ಯಕ್ರಮದ ನಂತರ ಡಿ.ಸಿ. ಕಛೇರಿಯವರೆಗೆ ಮೆರವಣಿಗೆ ಜರುಗಲಿದೆ. ಮೆರವಣಿಗೆಯಲ್ಲಿ ಸಾಗಿದ ಶರಣ - ಶರಣೆಯರು ಬೆಂಗಳೂರಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ರಾಜ್ಯ ಜನಗಣತಿ ಆಯುಕ್ತರಿಗೆ, ಕೇಂದ್ರ ಸರ್ಕಾರದ ಜನಗಣತಿ ಮುಖ್ಯ ಆಯುಕ್ತರಿಗೆ, ಇನ್ನಿತರ ಊರುಗಳಲ್ಲಿ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸುವರು.

ಲಿಂಗಾಯತ ಧರ್ಮ ಜಾಗೃತಿ ಸಭೆಗಳನ್ನು ಕೆಳಕಂಡ ಸ್ಥಳಗಳಲ್ಲಿ ಏರ್ಪಡಿಸಲಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಆಯಾ ಊರುಗಳ ಸುತ್ತಲಿನ ಜನರು ಭಾಗವಹಿಸಬೇಕೆಂದು ಕೋರುವೆವು. ರಾಜಧಾನಿ ಬೆಂಗಳೂರಿನಲ್ಲಿ ನಡೆಯುವ ಪ್ರದರ್ಶನಕ್ಕೆ ಕರ್ನಾಟಕ ರಾಜ್ಯದ ಎಲ್ಲ ಜಿಲ್ಲೆಗಳಿಂದ ಹೆಚ್ಚಿನ ಜನರು ಆಗಮಿಸಬೇಕೆಂದು ವಿನಂತಿ.

1. ಬೆಂಗಳೂರು - ದಿ.25-01-2011 ಸ್ಥಳ : ಬನಪ್ಪ ಪಾರ್ಕ್, ಕೆಂಪೇಗೌಡ ರಸ್ತೆ
ವೇಳೆ : ಬೆಳಿಗ್ಗೆ -10-30 ಸಂಪರ್ಕಿಸುವ ಸಂಖ್ಯೆ : 9880296108/ 9663385657

2. ಬಳ್ಳಾರಿ - ದಿ.31-01-2011 ಸ್ಥಳ : ಬಸವ ಮಂಟಪ, ಬಸವೇಶ್ವರ ನಗರ, ಬಳ್ಳಾರಿ
ವೇಳೆ : ಸಂಜೆ - 6-00 ಸಂಪರ್ಕಿಸುವ ಸಂಖ್ಯೆ : 9341033346

3. ಗುಲಬರ್ಗಾ- ದಿ.02-2-2011 ಸ್ಥಳ : ನಂತರ ತಿಳಿಸಲಾಗುವುದು
ವೇಳೆ : ಬೆಳಿಗ್ಗೆ -10-30 ಸಂಪರ್ಕಿಸುವ ಸಂಖ್ಯೆ : 9844895686

4. ಬೀದರ - ದಿ.4-02-2011 ಸ್ಥಳ : ನಂತರ ತಿಳಿಸಲಾಗುವುದು
ವೇಳೆ : ಬೆಳಿಗ್ಗೆ -10-30 ಸಂಪರ್ಕಿಸುವ ಸಂಖ್ಯೆ : 9449138481

5. ಹುಬ್ಬಳ್ಳಿ - ದಿ.6-02-2011 ಸ್ಥಳ : ನಂತರ ತಿಳಿಸಲಾಗುವುದು
ವೇಳೆ : ಸಂಜೆ - 6-00 ಸಂಪರ್ಕಿಸುವ ಸಂಖ್ಯೆ : 9448420508/ 0836 - 2306106

6. ಬೆಳಗಾವಿ - ದಿ.8-02-2011 ಸ್ಥಳ : ಕನ್ನಡ ಸಾಹಿತ್ಯ ಭವನ ಪ್ರಾಂಗಣ, ಕಿತ್ತೂರು ಚೆನ್ನಮ್ಮ ಸರ್ಕಲ್
ವೇಳೆ : ಬೆಳಿಗ್ಗೆ -10-30 ಸಂಪರ್ಕಿಸುವ ಸಂಖ್ಯೆ : 9448444771

ಗುರು ಬಸವಣ್ಣನವರು ಸ್ಥಾಪಿಸಿದ ಲಿಂಗಾಯತ ಧರ್ಮ ಮತ್ತು ಸಮಾಜಗಳ ಅಳಿವು ಉಳಿವಿನ ಪ್ರಶ್ನೆ ಇದಾಗಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಲಿಂಗಾಯತರು ಮತ್ತು ಸಮಾನ ಮನಸ್ಕರಾದ ಲಿಂಗಾಯತೇತರರು, ಪ್ರಗತಿಪರ ಚಿಂತಕರು, ಹಿಂದುಳಿದ ವರ್ಗದವರು ಈ ರ್‍ಯಾಲಿಯಲ್ಲಿ ಭಾಗವಹಿಸಬೇಕೆಂದು ಕೋರುತ್ತೇವೆ.

ಸಂಘ - ಸಂಸ್ಥೆಗಳ ಒಕ್ಕೂಟವನ್ನು ರಚಿಸಿಕೊಂಡು ಒಗ್ಗಟ್ಟಿನಿಂದ ಹೋರಾಡ ಬೇಕೆಂಬ ಹಂಬಲವಿರುವುದರಿಂದ ಸಮಾನ ವಿಚಾರಧಾರೆಯ ಎಲ್ಲ ಸಂಘ -ಸಂಸ್ಥೆಗಳವರೂ ತಮ್ಮ ಹೆಸರು ಸೂಚಿಸುವುದಲ್ಲದೆ ಈ ಒಕ್ಕೂಟದಲ್ಲಿ ಸೇರಿಸಿಕೊಳ್ಳಬೇಕೆಂದು ಕೋರುತ್ತೇವೆ.

ಸಂಪರ್ಕಿಸುವ ವಿಳಾಸ : ಬಸವ ಮಂಟಪ, 2035,
20ನೇ ಮೇನ್, 2ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು -560010
ದೂರವಾಣಿ: 080-23131476/9880296108/9663385657

ಪೂಜ್ಯ ಶ್ರೀಮನ್ನಿರಂಜನ ಮಹಾಜಗದ್ಗುರು
ಮಾತೆ ಮಹಾದೇವಿಯವರು
ಸಂಚಾಲಕರು,
ಬಸವ ತತ್ವಾಭಿಮಾನಿಗಳ ಒಕ್ಕೂಟ

ಲಿಂಗದೇವನ ನಿಷ್ಠೆ

– ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ

ದೇವನೊಬ್ಬ ನಾಮ ಹಲವು
ಪರಮ ಪತಿವ್ರತೆಗೆ ಗಂಡನೊಬ್ಬ
ಮತ್ತೊಂದಕ್ಕೆರಗಿದಡೆ ಕಿವಿ ಮೂಗ ಕೊಯ್ವುವನು
ಹಲವು ದೈವದ ಎಂಜಲ ತಿಂಬವರನೇನೆಂಬೆ
ಲಿಂಗದೇವಾ ?

– ಧರ್ಮಪಿತ ಬಸವ ತಂದೆಯವರು

ತತ್ವನಿಷ್ಠನೂ, ಗುರುಬಸವ ಪ್ರಿಯನೂ ಆದ ಲಿಂಗಾಯತನೂ ಅನುಸರಿಸಬೇಕಾದ, ತತ್ವಗಳ ಸಾಲಿನಲ್ಲಿ ಬರುವ, ಷಟ್‌ಶೀಲಗಳಲ್ಲಿ ಮೊದಲ ಸ್ಥಾನವನ್ನು, ಅಷ್ಟಾವರಣ ಮತ್ತು ಷಡಾಚಾರಗಳಲ್ಲಿ 2ನೇ ಸ್ಥಾನವನ್ನು ಷಟ್‌ಕ್ರಿಯೆ ಮತ್ತು ಷಟ್ ಸೂತ್ರಗಳಲ್ಲಿ 3ನೇ ಸ್ಥಾನವನ್ನು ಪಡೆದಿರುವ ಜಗತ್ಕರ್ತ ಪರಮಾತ್ಮನ ಮತ್ತು ಜೀವಾತ್ಮನ ಸಂಯೋಗದ ಕುರುಹಾದ ಇಷ್ಟಲಿಂಗವು, ವಚನಸಾಹಿತ್ಯದಲ್ಲಿ ತಾತ್ವಿಕವಾಗಿ ಪರಮೋನ್ನತ ಸ್ಥಾನವನ್ನು ಭದ್ರ ಮಾಡಿಕೊಂಡಿರುವುದು ಈಗ ನಿರ್ವಿವಾದವಾದ ಸತ್ಯವಾಗಿ ಉಳಿದಿದೆ.

ವಚನ ಸಾಹಿತ್ಯಕ್ಕೆ ಮಾತ್ರ ಮೀಸಲಾಗಿದ್ದ ಲಿಂಗದೇವನ ಪರಿಕಲ್ಪನೆಯನ್ನು ಈಗಿನ ಲಿಂಗಾಯತ ಸಮಾಜಕ್ಕೂ ವಿಸ್ತರಿಸಬೇಕೆಂಬ ಮಹದುದ್ದೇಶದಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಬಸವ ವಚನಾಂಕಿತದ ಕೂಡಲಸಂಗಮದೇವ ಸುಧಾರಣಾ ರೂಪವಾದ "ಲಿಂಗದೇವ" ಎಂಬ ಕ್ರಾಂತಿಕಾರಿ ವಚನಾಂಕಿತದ ಮೂಲಕ ಪ್ರಬಲವಾದ ವಿರೋಧದ ನಡುವೆಯೆ ಪ್ರಖ್ಯಾತರಾದುದು ಈಗ ಇತಿಹಾಸವಾಗಿದೆ. ಆದರೂ ಲಿಂಗದೇವನ ಅಸ್ತಿತ್ವ ಮತ್ತು ಸ್ವರೂಪವನ್ನು ಬಯಲಿಗೆ ತಂದು, ಅದಕ್ಕೊಂದು ಸಾಕಾರ ರೂಪವನ್ನು ಕೊಟ್ಟ ಗುರುಬಸವಣ್ಣನವರ ವ್ಯಕ್ತಿತ್ವಕ್ಕೆ ಸತ್ಕೀರ್ತಿಯನ್ನು ಲಗತ್ತಿಸಿ, ಲಿಂಗಾಯತ ಸಮಾಜ ಈ ಬಗ್ಗೆ ತಣ್ಣಗೆ ಕೂತಿದೆ, ಮಾತ್ರವಲ್ಲ ಇಂದಿಗೂ ಈ ಸಮಾಜದ ಬಹುಭಾಗ ತಮ್ಮ ಧಾರ್ಮಿಕ, ಸಾಮಾಜಿಕ, ನೈತಿಕ, ಪ್ರಬಲ ಸಂಘಟನೆಯ ಕುರುಹು (ಲಾಂಛನ)ನ ಬಗ್ಗೆ ಅರಿತೋ, ಅರಿಯದೆಯೋ ಮೌಢ್ಯತೆಯನ್ನು ಪ್ರದರ್ಶಿಸುತ್ತಿರುವುದು ಶೋಚನೀಯ.

12ನೇ ಶತಮಾನದಲ್ಲಿ ಗುರುಬಸವಣ್ಣನವರು ಸಂಶೋಧಿಸಿ ಕೊಟ್ಟಿರುವ ಇಷ್ಟಲಿಂಗವನ್ನು, ವಚನಗಳ ಮೂಲಕ ಪ್ರಚಾರಕ್ಕೆ ತಂದರು. ಮಾತ್ರವಲ್ಲ ಅನುಷ್ಠಾನಕ್ಕೆ ತಂದರು. ಆಗ ಹಿಂದೆ ಎಂದೂ ಕಂಡರಿಯದಿದ್ದ, ನಿತ್ಯ ನೂತನವಾದ, ಜಾತಿ ಮತ ಪಂಥ ಬೇದವಿಲ್ಲದ ಈ ಅದ್ಭುತ ಲಾಂಛನವನ್ನು ಎಲ್ಲರೂ ಭಕ್ತಿ, ಶ್ರದ್ಧೆ, ಏಕನಿಷ್ಠೆಗಳಿಂದ ಧರಿಸಿ, ಆರಾದಿಸಿದರು. ಹೀಗೆ ಅಳವಡಿಸಿಕೊಂಡ ಜನಾಂಗವನ್ನು ಲಿಂಗಾಯತರು ಎಂದು ಕರೆದರು. ಈ ಆಚರಣೆಯಿಂದಲೇ ಲಿಂಗಾಯತ ಸಮಾಜ-ಧರ್ಮ ಅಸ್ತಿತ್ವಕ್ಕೆ ಬಂದವು ಎಂಬುದು ಚಾರಿತ್ರಿಕ ಸತ್ಯ.

ಇಂದಿಗೂ ವಚನಗಳು ಧರ್ಮ-ಸಮಾಜಗಳ ದುಃಸ್ಥಿತಿಗೆ ಹೇಗೆ ಕನ್ನಡಿಯಾಗಬಲ್ಲವು ಎಂಬುದನ್ನು ಪ್ರಸ್ತುತ ವಚನದ ಮೂಲಕ ನೋಡೋಣ.

ಗುರುಬಸವಣ್ಣನವರು ವಾತ್ಸಲ್ಯಮಯಿಯಾಗಿ ಬುದ್ಧಿ ಹೇಳುವ ಪರಿ ಅನನ್ಯ ಸಹೃದಯರಾದ ಬಸವಣ್ಣನವರಿಗೆ ನಿಂದಿಸಲು ಬರದಿದ್ದರು, ದೇವನಿಷ್ಠೆಯ ಪ್ರಶ್ನೆ ಬಂದಾಗ ಮಾತ್ರ ಅಷ್ಟೆ

ವಜ್ರಹೃದಯಿಯಾಗಿ ಜರಿಯುವುದನ್ನು ಕಾಣುತ್ತೇವೆ. ಅಂಥ ಕೆಲವು ಮಾತುಗಳನ್ನು ಈಗ ನೋಡೋಣ.

* ಬೇಡ! ಬೇಡ! ಅನ್ಯದೈವವೆಂಬುದು ಹಾದರ ಕಾಣಿರೋ !
* ಸೂಳೆಗೆ ಹುಟ್ಟಿದವರ ಎನಗೆ ತೋರದಿರಯ್ಯ
* ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ
* ನೀನಲ್ಲದನ್ಯದೈವ ವುಂಟೆಂಬವನ ಬಾಯ ಕೆನ್ನೆವಾರೆ ಸೀಳಿದಲ್ಲದೆ ಎನ್ನ ಕೋಪ ಅಡಗದು.
* ತುಡುಗಿನಾಯನು ಪಿಡಿತಂದು ಸಾಕಿದಡೆ ತನ್ನೊಡೆಯಂಗೆ ಬಗುಳುವಂತೆ
* ವ್ರತಗೇಡಿಯಾಗಿ ನೂರುಬಾರಿ ಹೊಲೆಯರ ಮನೆಯ ನಾಯಾಗಿ ಹುಟ್ಟಿಸುವನು.

ಹೀಗೆ ಅಸಂಖ್ಯ ರೀತಿಯಲ್ಲಿ ಜರಿಯುತ್ತಾ, ಸರಿದಾರಿಗೆ ತರಲು ಬಯಸುವರು; ಯತ್ನಿಸುವರು. ಆದರೆ ಮಾತೃಹೃದಯಿ ಗುರುಬಸವ ತಂದೆಯವರ ಮಾತುಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸಿ, ತಪ್ಪುಗಳನ್ನು ತಿದ್ದಿಕೊಳ್ಳದ ಜನರಿಗೆ ವಚನ ಸಾಹಿತ್ಯದಲ್ಲಿ ಬಲವಾದ ಪ್ರಹಾರ ಉಂಟು. ಅವು ಸಮಾಜದ ಕೆಳಸ್ತರದಿಂದ ಬಂದು, ಲಿಂಗದೀಕ್ಷೆ ಸ್ವೀಕರಿಸಿ, ತತ್ತ್ವನಿಷ್ಠೆಯಿಂದ ಬಸವ ಪಥದಲ್ಲಿ ಸಾಗಿದ ಶರಣರದು. ಅಂದರೆ ಅವು ಪೋಲಿಸರು ಕಳ್ಳಕಾಕರನ್ನು ಬೆದರಿಸಿದಂತ ಮಾತುಗಳ ಕಡೆಗೂ ಗಮನ ಹರಿಸೋಣ. ಏಕೆಂದರೆ ಈ ಮಾತುಗಳು ಕೇಳಲಿಕ್ಕೆ ಕಠೋರವೆನಿಸಿದರೂ ಬಸವತತ್ತ್ವಕ್ಕೆ ಪೋಷಕವಾಗಿಯೇ ಇವೆ.

* ಮತಿಭ್ರಷ್ಟರನೇನೆಂಬೆನಯ್ಯ? – ಮಾಚಿ ತಂದೆಗಳು.
* ತೊತ್ತುಜಾತಿಗಳ ನುಡಿಯ ಕೇಳಲಾಗದು – ಮಾಚಿ ತಂದೆಗಳು.
* ಕ್ರೂರ ಕರ್ಮಿಗಳನೇನೆಂಬನಯ್ಯ – ಮಾಚಿ ತಂದೆಗಳು.
* ನರಕಿ ನಾಯಿಗಳನೇನೆಂಬನಯ್ಯ – ಮಾಚಿ ತಂದೆಗಳು.
* ಚಂಡಿನಾಯಿಗಳ ಕಂಡು ಮನ ಹೇಸಿತ್ತೆಂದಾತ – ಅಂಬಿಗರ ಚೌಡಯ್ಯ.
* ಎಡಪಾದರಕ್ಷೆಯ ತಗೊಂಡು ಹೊಡೆಯೆಂದಾತ – ಅಂಬಿಗರ ಚೌಡಯ್ಯ.

ಇಂಥ ಅನೇಕ ಮಾತುಗಳು ವಚನ ಸಾಹಿತ್ಯದಲ್ಲಿ ಕಾಣ ಸಿಗುತ್ತವೆ. ವಚನಗಳಲ್ಲಿ ವ್ಯಕ್ತವಾಗಿರುವ ಅತ್ಯುನ್ನತ ತತ್ವಾದರ್ಶಗಳ ಬಗ್ಗೆ ಭೋದಿಸಲು, ಮಾತಾಡಲು, ಬರೆಯಲು ಇಂದು ಬಹಳ ಕಷ್ಟವೆನಿಸುತ್ತಿದೆ. ಏಕೆಂದರೆ ಈ ಸದೃಢ ಮೌಲ್ಯಗಳನ್ನು ಒಪ್ಪಿ, ಸ್ವೀಕರಿಸಲು ಜನರ ಮನಸ್ಸು ಸಿದ್ಧವಿಲ್ಲ; ಮಾತ್ರವಲ್ಲ ಶಕ್ತರೂ ಅಲ್ಲ, ಕಾರಣ ಇಂಥ ಅಮೂಲ್ಯವಾದ ತತ್ವ, ಆದರ್ಶಗಳ ಪರಿಚಯವೇ ಇಂದಿನ ಜನಾಂಗಕ್ಕೆ ಇಲ್ಲದೇ ಇರುವುದು ಶೋಚನೀಯ. ಹಾಗೆಂದು ಸುಮ್ಮನೇ ಕೂರಲು ಬರುವುದಿಲ್ಲ. ಕಳ್ಳತನ, ದರೋಡೆಗಳು ತಪ್ಪಿದಲ್ಲ ಎಂದು ಪೋಲಿಸರು ಕೆಲಸ ಮಾಡದೆ ಸಮ್ಮನಿದ್ದರೆ ಸಮಾಜದಲ್ಲಿ ಅಶಾಂತಿ ಹೆಚ್ಚಾಗುವಂತೆ ಇಂಥ ಧಾರ್ಮಿಕ, ತಾತ್ವಿಕ ನಂಬಿಕೆಗಳನ್ನು ಬೆಳೆಸುವುದರಿಂದ ಅಲ್ಪಸ್ವಲ್ಪವಾದರೂ ಧರ್ಮ ಸತ್ಯಗಳು ಉಳಿಯುತ್ತವೆ. ಅಂಥ ಒಂದು ಕಿರು ಪ್ರಯತ್ನವೇ ಈ ಲೇಖನ. ಈಗ ನಾವು ವಚನ ರೂಪದಲ್ಲಿರುವ ಗುರುಬಸವಣ್ಣನವರ ಆದೇಶವನ್ನು ಉಲ್ಲೇಖಿಸೋಣ.

ದೇವನೊಬ್ಬ ; ನಾಮ ಹಲವು – ಇದು ಬಹಳ ಪ್ರಸಿದ್ಧವಾದ ಸೂಕ್ತಿ. ಬಾಲ್ಯದಿಂದಲೂ ಪರಿಚಯವಾದದ್ದು. ಆದರೆ ಇದರ ನಿಜಾರ್ಥ ಅರಿವಿಗೆ ಬಂದಿದ್ದು ಗುರುಮುಖೀ ವಚನ ಸಾಹಿತ್ಯದ ಸಂಪರ್ಕ ಮಾತ್ರದಿಂದ. ದೇವರು ಒಬ್ಬನೇ ಅವನನ್ನು ನಮಗೆ ಇಷ್ಟವಾದ ಅನೇಕ ಹೆಸರಿನಿಂದ ಕರೆಯಲಾಗುತ್ತದೆ. ಪ್ರವಚನ ಪಿತಾಮಹರೆನಿಸಿದ್ದ ಪೂಜ್ಯಶ್ರೀ ಲಿಂಗಾನಂದ ಅಪ್ಪಾಜಿಯವರು ಈ ಸೂಕ್ತಿಯನ್ನು ವಿವರಿಸುತಿದ್ದುದು ಹೀಗೆ, "ಒಬ್ಬ ವ್ಯಕ್ತಿ ಹೇಗೆ ತಾಯಿಗೆ ಮಗನು, ಪತ್ನಿಗೆ ಪತಿಯೂ, ಮಗನಿಗೆ ತಂದೆಯೂ, ಕಛೇರಿಯಲ್ಲಿ ಅಧಿಕಾರಿಯೂ, ಆಳಿಗೆ ಯಜಮಾನನೂ ಆಗಿ ವಿವಿಧ ಪಾತ್ರ ಮಾಡುತ್ತಾನೆ. ಹಾಗೆಯೇ ಪರಮಾತ್ಮನು ಸೃಷ್ಠಿ, ಸ್ಥಿತಿ, ಲಯ, ಅನುಗ್ರಹ, ತಿರೋಧಾನ ಎಂಬ ಕರ್ತವ್ಯಗಳನ್ನು ಬ್ರಹ್ಮ, ವಿಷ್ಣು, ರುದ್ರ, ಗುರು, ಲಿಂಗ, ಎಂಬ ಹಲವು ಹೆಸರಿನಲ್ಲಿ ಕಾರ್ಯ ನಿರ್ವಹಿಸುತ್ತಾನೆ. ಆದರೆ ಬ್ರಹ್ಮ, ವಿಷ್ಣುವಿನ ಮುಂತಾದ ಹೆಸರಿನ ವ್ಯಕ್ತಿಗಳ ದೇವತೆಗಳನ್ನೇ ದೇವರು ಎಂದು ತಿಳಿಯಬಾರದು", ಎಂದು. ಅದೇ ರೀತಿ ಗುರು, ಲಿಂಗ, ಜಂಗಮ ಸಾಕ್ಷಿಯಾಗಿ ಕೈಹಿಡಿದವನನ್ನೇ ಪತಿ ಎಂದು ಪತಿವ್ರತೆಯಾದ ಸ್ತ್ರೀ ನಂಬುತ್ತಾಳೆಯೇ ವಿನಃ ಪರಪುರುಷರನ್ನಲ್ಲ. ಅಲ್ಲದೇ ತನ್ನ ಗಂಡನ ಹೆಸರನ್ನೇ ಬೇರೊಬ್ಬರು ಹೊಂದಿದ್ದರೂ ಆಕೆ ಆತನನ್ನು ಪತಿ ಎಂದು ಭಾವಿಸುವುದಿಲ್ಲ ಅಥವಾ ಕರೆಯುವುದಿಲ್ಲ. ಇಲ್ಲಿ ಪತಿಯಾದವನು ಬಯಸುವುದು ; ನಿರೀಕ್ಷಿಸುವುದು ಹೆಂಡತಿಯ ಪರಿಪೂರ್ಣ ಪ್ರೇಮವನ್ನು ಎಂಬುದು ಗಮನಾರ್ಹ. ಹೀಗೆ ಪತಿ ಪತ್ನಿಯರು ಪರಸ್ಪರ ಪರಿಶುದ್ಧವಾದ ಪ್ರೀತಿ ಪ್ರೇಮವನ್ನು ಕೊಟ್ಟರೆ ಮಾತ್ರ ಆ ಸಂಸಾರ ಮತ್ತು ಸಂಬಂಧ ಹಾರ್ದಿಕವಾಗಿರುತ್ತದೆ ; ಮಧುರವಾಗಿರುತ್ತದೆ.

ಬದಲಿಗೆ ಗಂಡನಾಗಲಿ, ಅಥವಾ ಹೆಂಡತಿಯಾಗಲಿ ಬೇರೆ ಸ್ತ್ರೀ/ಪುರುಷರಿಗೆ ಮನಸ್ಸು ಕೊಟ್ಟರೆ ಅಂದೇ ಸಂಸಾರ ರಣರಂಗವಾಗುವುದರಲ್ಲಿ ಸಂದೇಹವಿಲ್ಲ. ಇಂಥ ನರಕಸದೃಶ ಚಿತ್ರಗಳು ಸಮಾಜದಲ್ಲಿ ನಿತ್ಯಸತ್ಯವಾಗಿ ಕಾಣಸಿಗುತ್ತಿವೆ. ತನ್ನ ಹೆಂಡತಿ ತನ್ನನ್ನು ಬಿಟ್ಟು ಮತ್ತೊಬ್ಬ ಪುರುಷನೊಂದಿಗೆ ಸಂಪರ್ಕ ಹೊಂದಿದ್ದಾಳೆ ಎಂದು ಗಂಡನಿಗೆ ತಿಳಿದರೆ ಅವನು ಆಕೆಗೆ ಶಿಕ್ಷೆ ಕೊಡುವನು. ಸಿಟ್ಟನಿಂದ ಕಿವಿ ಮೂಗನ್ನು ಕತ್ತರಿಸಿ ಕುರೂಪಗೊಳಿಸುವನು. ಆಕೆಗೆ ಮುಖವೆತ್ತಿ ತಿರುಗದಂತೆ ಮಾಡುವನು. ತನ್ನ ಗಂಡನಿದ್ದಂತೆ ಪರಪುರುಷನೊಂದಿಗೆ ರಮಿಸುವುದು ಅಕ್ಷಮ್ಯ ಅಪರಾಧ ಎಂದು ನೀತಿ ಶಾಸ್ತ್ರದಲ್ಲಿ ಪರಿಗಣಿಸಲಾಗಿದೆ. ಅದೇ ರೀತಿ ಲಿಂಗಭಕ್ತನಿಗೆ ತನ್ನ ಎದೆಯ ಮೇಲಿರುವ ಲಿಂಗದೇವನನ್ನು ಹೊರತುಪಡಿಸಿ ಅನ್ಯದೇವತೆಗಳನ್ನು ಆರಾಧಿಸುವುದು, ಸ್ತುತಿಸುವುದು, ಅವುಗಳ ಹೆಸರಿನಲ್ಲಿ ಆಹಾರ ಸ್ವೀಕರಿಸುವುದು ಮುಂತಾದ ಆಚರಣೆಗಳು ನಿಷಿದ್ಧ ; ಇವುಗಳನ್ನು ತ್ಯಜಿಸಬೇಕು.

ಶೀಲ ಅಂದರೆ ನಂಬಿಕೆ ಎಂಬ ಅರ್ಥವೂ ಇದೆ. ಷಟ್ ಶೀಲಗಳಲ್ಲಿ ಒಂದಾದ ಲಿಂಗದೇವ ನಿಷ್ಠೆ (ನಂಬಿಕೆ) ಮೊದಲು ಅಳವಡಿಸಿಕೊಳ್ಳಬೇಕು. ಸದೃಢ ನಂಬಿಕೆಯನ್ನು ಬೆಳಸಿಕೊಳ್ಳಬೇಕು. ಇಂಥ ನಿಷ್ಠೆ – ನಂಬಿಕೆಗಳನ್ನು ಬೆಳೆಸಿಕೊಳ್ಳಲಾರದ ದುರ್ಬಲರನ್ನು ಏನೆಂದು ಕರೆಯಬೇಕು. ಇವರನ್ನು ಯಾವ ಗುಂಪಿಗೆ ಸೇರಿಸಬೇಕೆಂದು ನೇರವಾಗಿ ಪರಮಾತ್ಮನನ್ನೇ ಧರ್ಮಪಿತರು ಇಲ್ಲಿ ಪ್ರಶ್ನಿಸುತ್ತಿದ್ದಾರೆ.

ಶರಣ ಬಂಧುಗಳೇ, ಧರ್ಮಪಿತರು ತಮ್ಮ ವಚನದಲ್ಲಿ ಮೊದಲ ಮೂರು ಸಾಲುಗಳನ್ನು ನಮಗೆ ಹೇಳಿ ಕೊನೆ ಸಾಲಿನಲ್ಲಿ ಲಿಂಗದೇವ ನಿಷ್ಠೆಯನ್ನು ಅಳವಡಿಸಿಕೊಳ್ಳಲಾರದ ಜನರ ಅಸಹಾಯಕತೆಗೆ ಪರಮಾತ್ಮನೇ ಉತ್ತರಿಸಬೇಕೆಂದು ನಿರೀಕ್ಷಿಸಿದ್ದಾರೆ. ಏಕೆ ಹೀಗೆ ಎಂದು ನಿಮಗೆ ಗೊತ್ತೇ? ಗೊತ್ತಿದ್ದರೆ ಹೇಳಿ; ಗೊತ್ತಿಲ್ಲದಿದ್ದರೆ ಕೇಳಿ.

ಅದೊಂದು ಮಕ್ಕಳ ನೈತಿಕ ಶಿಕ್ಷಣ ಶಿಬಿರ. ಈ ಶಿಬಿರದ ಮುಖ್ಯ ಉದ್ದೇಶ ಮಕ್ಕಳಲ್ಲಿ ಸತ್ಯಪ್ರಿಯತೆ ಮತ್ತು ನೈತಿಕತೆಗಳನ್ನು ಬಿತ್ತಿ ಬೆಳೆಸುವುದು. ಅದರಂತೆ ಒಂದು ತಿಂಗಳ ಕಾಲ ಮಕ್ಕಳಿಗೆ ಈ ಆದರ್ಶಗಳು ಮತ್ತು ಮೌಲ್ಯಗಳ ಬಗ್ಗೆ ಸಾಕಷ್ಟು ತಿಳುವಳಿಕೆ ಮತ್ತು ತರಭೇತಿಯನ್ನು ಕೊಡಲಾಗಿತ್ತು. ಕೊನೆಯಲ್ಲಿ ಸಮಾರೋಪ ಸಮಾರಂಭವನ್ನು ಏರ್ಪಡಿಸಿ ಮಕ್ಕಳೊಂದಿಗೆ ಅವರ ಪೋಷಕರು, ತರಬೇತಿದಾರರು ಎಲ್ಲರನ್ನು ಸೇರಿಸಿ ಬೀಳ್ಕೊಡಿಗೆ ಇಟ್ಟುಕೊಂಡರು.

ಸಮಾರಂಭದ ವೇದಿಕೆಯಲ್ಲಿ ಅತಿಥಿಗಳೊಂದಿಗೆ ನೈತಿಕ ಶಿಬಿರದ ಸಂಸ್ಥಾಪಕರು ಆಸೀನರಾಗಿದ್ದರು. ಅವರು ತಮ್ಮ ಭಾಷಣದಲ್ಲಿ ಈ ರೀತಿ ಪ್ರಸ್ತಾಪಿಸಿದರು.

"ಮುಖ್ಯ ಅತಿಥಿಗಳೇ, ಪೋಷಕರೇ, ತಾಯಿ ತಂದೆಯರೆ, ತರಬೇತಿ ನೀಡಿದ ಶಿಕ್ಷಕರೇ, ಹಾಗೂ ಮಕ್ಕಳೇ, ಇದುವರೆಗು ತಾವೆಲ್ಲ ಒಂದು ತಿಂಗಳ ಕಾಲ ನೈತಿಕ ಶಿಕ್ಷಣದ ತರಬೇತಿಯನ್ನು ಕೊಡಿಸಿದ್ದೀರಿ, ಕೊಟ್ಟಿದ್ದೀರಿ ಮತ್ತು ಪಡೆದಿದ್ದೀರಿ, ಸಂತೋಷ. ಈ ತರಬೇತಿಯ ಸತ್ವ ಪರೀಕ್ಷೆಗಾಗಿಯೇ ಈ ಸಮಾರೋಪವನ್ನು ಆಯೋಜಿಸಲಾಗಿದೆ, ಎಂದು ಹೇಳುತ್ತಾ, ಅಲ್ಲಿ ನೆರೆದಿದ್ದ ಮಕ್ಕಳನ್ನು ಉದ್ದೇಶಿಸಿ ಹೀಗೆ ಹೇಳಿದರು.

"ಮಕ್ಕಳೇ, ಈಗ ನಿಮ್ಮನ್ನು ನಾನೊಂದು ಪ್ರಶ್ನೆ ಕೇಳುತ್ತೇನೆ, ನೀವು ಸರಿಯಾದ ಉತ್ತರ ನೀಡಿದರೆ ನನಗೆ ಸಂತೋಷವಾಗುತ್ತದೆ. ನಿಮ್ಮಿಂದ ಉತ್ತರ ಬರದಿದ್ದರೆ ನಿಮಗೆ ತರಬೇತಿ ನೀಡಿದ ಶಿಕ್ಷಕರನ್ನು ಪ್ರಶ್ನೆ ಮಾಡುತ್ತೇನೆ, ಅವರು ಉತ್ತರಿಸದಿದ್ದರೆ ನಿಮ್ಮ ತಾಯಿ ತಂದೆಯರನ್ನೇ ಕೇಳುತ್ತೇನೆ. ಅವರು ಉತ್ತರಿಸಲು ಸೋತರೇ ಕೊನೆಗೆ ದೇವರನ್ನೇ ಪ್ರಶ್ನಿಸುತ್ತೇನೆ" ಎಂದು. ಅದೇ ರೀತಿ ಬಸವಾದಿ ಪ್ರಮಥರು ತಾವು ವಚನಗಳ ಮೂಲಕ, ಆಧ್ಯಾತ್ಮಿಕ, ಧಾರ್ಮಿಕ, ನೈತಿಕ, ಸಾಮಾಜಿಕ, ಆರ್ಥಿಕ, ಸಾಹಿತ್ಯಿಕ ಮೌಲ್ಯಗಳನ್ನು ಉಪದೇಶಿಸಿದರು. ತಾವು ಆಚರಿಸಿ ತೋರಿಸಿದರು. ಬಸವಾದಿ ಪ್ರಮಥರ ಕಾಲದ ನಂತರವೂ ಈ ತತ್ತ್ವ, ಮೌಲ್ಯಗಳ ಪುನರ್ ಪ್ರತಿಷ್ಠಾಪನೆ ಆಗುತ್ತ ಬಂದಿತು. ಇಷ್ಟೆಲ್ಲಾ ನಿರಂತರ ಪ್ರಯತ್ನಗಳ ನಡುವೆಯೂ ಸಮಾಜ ಇನ್ನು ಅಜ್ಞಾನದಲ್ಲಿಯೇ ಉಳಿದರೆ ಯಾರನ್ನು ಪ್ರಶ್ನಿಸಬೇಕು?! ಅನುಯಾಯಿಗಳನ್ನೇ, ಮಠಾಧೀಶರನ್ನೇ ಅಥವಾ ದೇವರನ್ನೇ, ಈ ಪ್ರಶ್ನೆಗೆ ಪ್ರಜ್ಞಾವಂತರು ಉತ್ತರಿಸುವರೇ?!

ಈ ಪ್ರಶ್ನೆಗೆ ಉತ್ತರವನ್ನು ಒಂದು ದೃಷ್ಟಾಂತದ ಮೂಲಕ ತಿಳಿಯೋಣ ;

ಅಂಗದ ಮೇಲಣ ಲಿಂಗವ ಹಿಂಗಿ ಸ್ಥಾವರ ಲಿಂಗಕ್ಕೆರಗುವ
ಭಂಗಿತರ ಮುಖದ ನೋಡಲಾಗದು.
ಅದೆಂತೆಂದೊಡೆ ; ತನ್ನ ಗಂಡನ ಬಿಟ್ಟು ಅನ್ಯ
ಗಂಡರಿಗೆರಗುವ ಹಾದರಗಿತ್ತಿಯಂತೆ ಆವಂದಿರ ಭಕ್ತಿ
ಅಂತಪ್ಪ ಪಂಚ ಮಹಾಪಾತಕರ
ಮುಖದತ್ತ ತೋರದಿರಾ ಗುಹೇಶ್ವರಾ.

– ವೈರಾಗ್ಯಮೂರ್ತಿ ಅಲ್ಲಮಪ್ರಭುದೇವರು (992)

ಪ್ರಾಣ ಚೈತನ್ಯ - ಕಿರು ಪರಿಚಯ

– ಡಾ|| ಸರಸ್ವತಿ ಹೆಗ್ಗಡೆ

ಪ್ರಾಣ ಚೈತನ್ಯ ಚಿಕಿತ್ಸೆ ಪುರಾತನ ಭಾರತೀಯ ವಿದ್ಯೆ. ಇದು ಒಂದು ವೈಜ್ಞಾನಿಕ ಕಲೆಯಾಗಿ ರೂಪುಗೊಂಡಿದೆ. 120ಕ್ಕಿಂತ ಹೆಚ್ಚಿನ ದೇಶಗಳಲ್ಲಿ ಜನರು ತಮ್ಮ ಕಾಯಿಲೆಗಳ ನಿವಾರಣೆಗಾಗಿ ಇದನ್ನು ಉಪಯೋಗಿಸುತ್ತಿದ್ದಾರೆ. ಅದರ ಕಿರು ಪರಿಚಯ ಇಲ್ಲಿದೆ.

ನಮ್ಮ ಶರೀರ, ಮನಸ್ಸುಗಳಿಗೆ ಬರುವ ಎಲ್ಲಾ ರೀತಿಯ ಕಾಯಿಲೆಗಳನ್ನು ನಿವಾರಿಸಿ ಕೊಳ್ಳುವ ಶಕ್ತಿ ನಮ್ಮೊಳಗೇ ಇರುತ್ತದೆ. ಹಾಗಾಗಿಯೇ ಸಣ್ಣ ಪುಟ್ಟ ನೆಗಡಿ ಕೆಮ್ಮು ಗಾಯಗಳಿಗೆ ನಾವು ಔಷಧಿ ಸೇವನೆ ಮಾಡುವುದಿಲ್ಲ. ಮಕ್ಕಳಲ್ಲಿ ಉತ್ಸಾಹ, ಸಂತೋಷ, ನೆಮ್ಮದಿ, ಆಧ್ಯಾತ್ಮಿಕತೆ ಇಂತಹ ಸಕಾರಾತ್ಮ ಭಾವನೆ ತುಂಬಿರುವವರಲ್ಲಿ ಸಾಮರ್ಥ್ಯ ಹೆಚ್ಚಾಗಿರುತ್ತದೆ.

ನೋವು, ದುಃಖ, ನಿರಾಸೆ, ಚಿಂತೆಗಳಿಂದ ನಮ್ಮನ್ನು ನಾವು ವಾಸಿಮಾಡಿಕೊಳ್ಳುವ ಶಕ್ತಿ ಕಮ್ಮಿಯಾಗುತ್ತದೆ. ಹಾಗಾಗಿಯೇ ಇತ್ತೀಚಿನ ದಿನಗಳಲ್ಲಿ ಜನರು ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಇಂತಹ ಕಾಯಿಲೆಗಳಲ್ಲಿ ಚೈತನ್ಯ ಶರೀರದಲ್ಲಿ ಪ್ರಾಣಶಕ್ತಿಯ ಸಂಚಾರ ಮತ್ತು ಪೂರೈಕೆ ತೊಂದರೆ ಗೊಳಗಾಗಿರುತ್ತದೆ. ಹಾಗಾಗಿ ತೊಂದರೆಗೊಳಗಾದ ಚೈತನ್ಯ ಶರೀರದ ಸಮೀಪದಲ್ಲಿ ಕಾಯಿಲೆ ಕಾಣಿಸಿಕೊಳ್ಳುತ್ತದೆ. ನಮ್ಮ ಚೈತನ್ಯ ಶರೀರದಲ್ಲಿರುವ ಚಕ್ರಗಳಿಗೂ ತೊಂದರೆ ಉಂಟಾಗಿರುತ್ತದೆ.

ಪ್ರಾಣ ಚಿಕಿತ್ಸೆಯ ಪ್ರಕಾರ ನಮಗೆ ಎರಡು ಶರೀರಗಳಿವೆ. ಕಣ್ಣಿಗೆ ಕಾಣುವ ಸ್ಥೂಲ ಶರೀರ ಮತ್ತು ಕಣ್ಣಿಗೆ ಕಾಣದಿರುವ ಚೈತನ್ಯ (ಸೂಕ್ಷ್ಮ) ಶರೀರ. ನಮ್ಮ ಸೂಕ್ಷ್ಮ ಶರೀರವು ನಮ್ಮ ಸ್ಥೂಲ ಶರೀರ ಮತ್ತು ಮನಸ್ಸಿನ ಮೇಲೆ ಪರಿಣಾಮ ಬೀರುತ್ತಿರುತ್ತದೆ. ಹಾಗಾಗಿ ಚೈತನ್ಯ ವಲಯದಲ್ಲಿ ತೊಂದರೆಯಾದಾಗ ಶರೀರ ಮನಸ್ಸುಗಳಿಗೂ ತೊಂದರೆ ಆಗುತ್ತದೆ. ಚಿಕಿತ್ಸೆಯೂ ಹಾಗೆ. ಚೈತನ್ಯ ಶರೀರ ಸರಿಯಾದಾಗ ಮನಸ್ಸು ಮತ್ತು ದೇಹ ಎರಡೂ ಆರೋಗ್ಯಗೊಳ್ಳುತ್ತದೆ.

ಪ್ರಾಣ ಚಿಕಿತ್ಸೆಯಲ್ಲಿ ಆರೋಗ್ಯ ಉತ್ತಮಗೊಳಿಸಲು ಚೈತನ್ಯದ ವರ್ಗಾವಣೆ ಮಾಡಲಾಗುತ್ತದೆ. ನಮ್ಮ ಸುತ್ತಲಿನ ಗಾಳಿ, ಸೂರ್ಯ, ಭೂಮಿಯಿಂದ ನಾವು ನಿರಂತರವಾಗಿ ಚೈತನ್ಯ ಪಡೆದು ಕೊಳ್ಳುತ್ತಿರುತ್ತೇವೆ. ರೋಗದ ಸ್ಥಿತಿಯಲ್ಲಿ ಈ ಸಾಮರ್ಥ್ಯ ಕಮ್ಮಿಯಾಗಿರುತ್ತದೆ. ಹಾಗಾಗಿ ಚಿಕಿತ್ಸಕನು ವಾತಾವರಣದಿಂದ ಅಗತ್ಯವಾದ ಚೈತನ್ಯವನ್ನು ರೋಗಿಗೆ ವರ್ಗಾಯಿಸುತ್ತಾನೆ. ಈ ಪ್ರಕ್ರಿಯೆಯನ್ನು ಪ್ರಾಣ ಚಿಕಿತ್ಸೆ ಎನ್ನುತ್ತಾರೆ.

ಅಲೋಪಥಿ, ಆಯುರ್ವೇದಗಳಲ್ಲಿ ಕಾಯಿಲೆ ಗುಣಪಡಿಸಲು ಔಷಧಿ ನೀಡಿದರೆ ಪ್ರಾಣ ಚಿಕಿತ್ಸೆಯಲ್ಲಿ ಗುಣಪಡಿಸಲು ಚೈತನ್ಯ ನೀಡಲಾಗುತ್ತದೆ. ಕಾಯಿಲೆಯಿಂದ ಕಾಯಿಲೆಗೆ ಚೈತನ್ಯದ ಪ್ರಮಾಣ ಮತ್ತು ವರ್ಗಗಳು ಬೇರೆಬೇರೆಯಾಗಿರುತ್ತದೆ. ಇದರ ಬಗ್ಗೆ ಚಿಕಿತ್ಸಕನಿಗೆ ತರಬೇತಿ ನೀಡಲಾಗುತ್ತದೆ. ನಮ್ಮೊಳಗಿನ ಚಿಕಿತ್ಸಾ ಸಾಮರ್ಥ್ಯ ಹೆಚ್ಚಿ ಕಾಯಿಲೆ ನಿವಾರಣೆ ಆಗುವುದರಿಂದ ಇದು ಎಲ್ಲಾ ರೀತಿಯ ಕಾಯಿಲೆಗಳಿಗೂ ಬಹಳ ಪರಿಣಾಮಕಾರಿ.

ಪ್ರಾಣಚಿಕಿತ್ಸೆ ಆಧ್ಯಾತ್ಮಿಕ ಸಾಧನೆಗೂ ಸಹಕಾರಿ. ಮನಸ್ಸು ಸ್ವಚ್ಛಗೊಳಿಸುವ ಪ್ರಕ್ರಿಯೆ ಪ್ರಾಣ ಚಿಕಿತ್ಸೆಯಲ್ಲಿದೆ. ಹಾಗಾಗಿ ಪೂಜೆ, ಧ್ಯಾನ, ಜಪಗಳಲ್ಲಿ ಏಕಾಗ್ರತೆ ಸಾಧಿಸಲು ಚಿಕಿತ್ಸೆ

ಅನುಕೂಲಕರ. ಅಲ್ಲದೇ ಆಧ್ಯಾತ್ಮಿಕ ಸಾಧಕರಲ್ಲಿ ಸಾಮಾನ್ಯವಾಗಿ ಕಂಡು ಬರುವ ಕಾಲುನೋವು, ಹೊಟ್ಟೆಯ ತೊಂದರೆ, ತಲೆ ನೋವು, ಆಯಾಸಗಳನ್ನು ತ್ವರಿತವಾಗಿ ಉಪಶಮನ ಮಾಡಿಕೊಳ್ಳಬಹುದು. ತಮ್ಮ ಸಾಧನೆಗಳನ್ನು ಬಿಟ್ಟು ಆಸ್ಪತ್ರೆಗೆ ಅಲೆಯುವ ಕೆಲಸವೂ ಕಮ್ಮಿಯಾಗುತ್ತದೆ.

ಬೇರೆ ವೈದ್ಯಕೀಯ ಪದ್ಧತಿಗಳಿಗಿಂತ ಪ್ರಾಣಚಿಕಿತ್ಸೆ ಸರಳವೂ ಹೌದು ಮತ್ತು ಸುಲಭವೂ ಹೌದು. ಚಿಕಿತ್ಸಾ ವಿಧಾನವನ್ನು ಕಲಿಯುವುದು ಕೂಡ ಬಹಳ ಸುಲಭ. ಸಾಮನ್ಯ ಜ್ಞಾನವಿರುವ ಯಾರೇ ಆದರೂ 16ಗಂಟೆಗಳ ಅವಧಿಯಲ್ಲಿ (ಅಥವಾ 2 ದಿನಗಳಲ್ಲಿ) ಇದನ್ನು ಕಲಿಯಬಹುದು. 2 ದಿನಗಳಲ್ಲಿ ಕಲಿತು ತಮಗೂ, ತಮ್ಮ ಸುತ್ತಲಿರುವವರಿಗೂ, ದೂರದಲ್ಲಿರುವವರಿಗೂ ಚಿಕಿತ್ಸೆ ನೀಡಬಹುದು. ಈ ವಿದ್ಯೆಯನ್ನು ವಿಜ್ಞಾನವಾಗಿ ರೂಪಿಸಿದವರು ಫಿಲಿಪೈನ್ಸ್ ದೇಶವಾದ ಮಾಸ್ಟರ್ ಚೊವಾ ಕೋಕ್ ಸುಯಿರವರು.

ಕೇವಲ ಔಷಧಿಯೇ ಆರೋಗ್ಯವೆಂದು ಭಾವಿಸದೇ ನಮ್ಮ ಆರೋಗ್ಯಕ್ಕೆ ನಾವೇ ರುವಾರಿಯಾಗೋಣ. ನಮ್ಮ ಪೂರ್ವಜರಂತೆ ಆರೋಗ್ಯ ಮತ್ತು ಆನಂದ ಜೀವನ ದ ರಹಸ್ಯ ಅರಿತು ಸಂತೃಪ್ತಿಯ ಬದುಕು ಬದುಕೋಣ. ನಮ್ಮ ಮುಂದಿನ ತಲೆಮಾರನ್ನು ಇನ್ನೂ ಆರೋಗ್ಯವಂತ ಗೊಳಿಸೋಣ.

ಇಳೆಯನ್ನಗಲಿದೆ ಪವಿತ್ರ ಚೇತನ

ಶರಣ. ಎ.ವಿ.ಗೋವಿಂರಾಜು, ಮೈಸೂರು

ಮೈಸೂರಿನ ಶರಣ. ಗೋವಿಂದರಾಜು ಅವರು ದಿ.18-9-1983ರಂದು ಜನಿಸಿ ಆದರ್ಶ ಜೀವನವನ್ನು ನಡೆಸಿ ದಿ.27-12-2010ರಂದು ಲಿಂಗೈಕ್ಯರಾದರು. ಲಿಂ|| ಶರಣ ವೆಂಕಟಪ್ಪ ಮತ್ತು ಶರಣೆ. ಕೆಂಚಮ್ಮನವರ ಸುಪುತ್ರರಾಗಿ ಜನಿಸಿ ನಂತರ ದೀಕ್ಷೆ ಪಡೆದು ಗುರು ಕರಕಮಲ ಸಂಜಾತರಾದರು. ತಾಯಿ ಕೆಂಚಮ್ಮನವರು ಆದರ್ಶ ಮಾತೆಯಾಗಿ ಮಕ್ಕಳನ್ನು ಬೆಳೆಸಿದ್ದು ಮಕ್ಕಳು, ಮೊಮ್ಮಕ್ಕಳೆಲ್ಲ ಶರಣ ಪಥದಲ್ಲಿ ಮುನ್ನಡೆದಿದ್ದಾರೆ. ಮೈಸೂರಿನ ಸಿದ್ಧಾರ್ಥ ಲೇಔಟಿನಲ್ಲಿ ಶ್ರೀ ಬಸವೇಶ್ವರ ಕಿರಾಣಿ ಸ್ಟೋರ್ಸ್ ಮಡಿಕಲ್ ಸ್ಟೋರ್ಸ್ ಅಲ್ಲದೆ ಶ್ರೀ ಬಸವೇಶ್ವರ ಕೇಬಲ್ ನೆಟ್‌ವರ್ಕ್‌ನಿಂದ ಶರಣ ಗೋವಿಂದ ರಾಜು ಜನಪ್ರಿಯತೆಯನ್ನು ಸಂಪಾದಿಸಿದ್ದರು. ನಮ್ಮ ಸಂಸ್ಥೆಗೆ ಉದಾರವಾಗಿ ಕಾಣಿಕೆ ನೀಡಿದ ಶರಣ. ಎ.ವಿ.ಗೋವಿಂದರಾಜು ಅವರದು ಆದರ್ಶ ಮಾದರಿ ಜೀವನ. ಸ್ವಲ್ಪ ಕಾಲ ಅನಾರೋಗ್ಯದಿಂದ ಬಳಲಿ ದಿ,27-12-2010ರಂದು ಶರಣ. ಎ.ವಿ.ಗೋವಿಂದರಾಜು ಲಿಂಗೈಕ್ಯರಾಗಿದ್ದು ನಮ್ಮ ಸಂಸ್ಥೆಗೇ ಅಲ್ಲ ಇಡೀ ಸಮಾಜಕ್ಕೆ ತುಂಬಲಾರದ ನಷ್ಟ. ಅವರ ಅಗಲಿಕೆಯನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಗುರು ಬಸವಣ್ಣನವರು ಶರಣ. ಗೋವಿಂದರಾಜು ಅವರ ಪರಿವಾರಕ್ಕೆ ನೀಡಲಿ; ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯು ದೊರಕಲಿ ಎಂದು ಹಾರೈಸುತ್ತೇನೆ.

-ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷರು, ರಾಷ್ಟ್ರೀಯ ಬಸವ ದಳ

ಇಷ್ಟ ಲಿಂಗ ದೀಕ್ಷಾ ಸಂಸ್ಕಾರ, ಯಾರು, ಯಾವಾಗ ಮಾಡಿಸಿಕೊಳ್ಳಬೇಕು?

-ಸಚ್ಚಿದಾನಂದ ಚಟನಳ್ಳಿ

ನರಜನ್ಮಕ್ಕೊಮ್ಮೆ ಬಂದ ಬಳಿಕ, ಗುರುವಿನ ಕುರುಹ ಕಾಣಬೇಕು.
ಗುರುವಿನ ಕುರುಹ ತಾ ಕಂಡ ಬಳಿಕ, ಶಿಷ್ಯನಾಗಿ ಗುರು ಕರಜಾತನಾಗಬೇಕು.
ಕಪಿಲಸಿದ್ಧಮಲ್ಲಿಕಾರ್ಜುನ ಪಾದ ಪದ್ಮದಲ್ಲಿ
ಐಕ್ಯವ ಗಳಿಸಬೇಕು ಘಟ್ಟಿವಾಳಯ್ಯಾ.

ಗುರು ಚೆನ್ನಬಸವಣ್ಣನವರಿಂದ ಇಷ್ಟಲಿಂಗದೀಕ್ಷೆ ಹೊಂದಿದ ಸಿದ್ಧರಾಮೇಶ್ವರರು, ಜ್ಯೋತಿ ಮುಟ್ಟಿ ಜ್ಯೋತಿಯಾದಂತೆ ಗುರು ಮುಟ್ಟಿ ಗುರುವಾಗಿದ್ದಾರೆ. ಇಲ್ಲಿ ಅವರು ಘಟ್ಟಿವಾಳಯ್ಯ ಎನ್ನುವ ಇನ್ನೊಂದು ಜ್ಯೋತಿಯನ್ನು ಬೆಳಗಿಸುತ್ತಾ ಈ ವಚನವನ್ನು ಹೇಳುತ್ತಿದ್ದಾರೆ. ನರಜನ್ಮಕ್ಕೊಮ್ಮೆ ಬಂದ ಬಳಿಕ ಪ್ರತಿಯೊಬ್ಬ ವ್ಯಕ್ತಿಯೂ ಸದ್ಗುರುವಿನ ದರ್ಶನ ಪಡೆಯಬೇಕು, ನಂತರ ಗುರುವಿನ ಕರಜಾತನಾಗಬೇಕು. ಅರ್ಥಾತ್ ಇಷ್ಟಲಿಂಗ ದೀಕ್ಷೆ ಹೊಂದಬೇಕು. ಏಕೆಂದರೆ ''ದೀಕ್ಷೆಯಿಲ್ಲದೆ ಮೋಕ್ಷವಿಲ್ಲ'' ಎನ್ನುವುದು ಶರಣರ ನುಡಿ, ಅದಕ್ಕಾಗಿಯೇ ಕಪಿಲಸಿದ್ಧ ಮಲ್ಲಿಕಾರ್ಜುನ (ಪರಮಾತ್ಮನ)ನ ಪಾದದಲ್ಲಿ ಐಕ್ಯವಾಗಲಿಕ್ಕೆ ಇಷ್ಟಲಿಂಗ ದೀಕ್ಷೆಯಿಂದ ಮಾತ್ರ ಸಾಧ್ಯವಿದೆ ಎಂದು ಸಿದ್ಧರಾಮೇಶ್ವರರು ಘಟ್ಟಿವಾಳಯ್ಯನವರಿಗೆ ಉಪದೇಶ ಮಾಡುತ್ತಾರೆ.

ದೀಕ್ಷಾ ಸಂಸ್ಕಾರ ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಅತ್ಯಂತ ಪ್ರಮುಖವಾದ ಘಟನೆ. ಅದು ವ್ಯಕ್ತಿಗೆ ಪುನರ್ಜನ್ಮವನ್ನು ಕೊಡುತ್ತದೆ. ಅಲ್ಲಮ ಪ್ರಭುದೇವರು, ಅನುಭಾವ ಮಂಟಪಕ್ಕೆ ಬರುವುದಕ್ಕಿಂತ ಮುಂಚೆ ಅನೇಕ ಸಿದ್ಧಿಗಳನ್ನು ಪಡೆದರೂ ಅದಾವುದೂ ಅವರಿಗೆ ತೃಪ್ತಿ ಕೊಟ್ಟಿರಲಿಲ್ಲ. ಆದರೆ ಇಷ್ಟಲಿಂಗ ದೀಕ್ಷೆ ಪಡೆದ ಮೇಲೆ ''ನಾ ಬಯಸುವ ಬಯಕೆ ಕೈ ಸಾರಿತ್ತಿಂದು'', 'ನಾನು ಬದುಕಿದೆನು' ಎಂದು ಸಂಭ್ರಾಂತಿಯನ್ನು ವ್ಯಕ್ತಪಡಿಸುತ್ತಾರೆ.

ಷಣ್ಮುಖ ಶಿವಯೋಗಿಗಳೂ ಕೂಡ ಇಷ್ಟಲಿಂಗ ದೀಕ್ಷೆ ಹೊಂದಿದ ಬಳಿಕ ಸಂಭ್ರಮಿಸಿದ ರೀತಿ ನೋಡಿದರೆ ಅಚ್ಚರಿಯಾಗುತ್ತದೆ.

ಜಗವನೊಳಕೊಂಡ ಲಿಂಗವು
ಸೊಗಯಿಸಿ ಇಂದೆನ್ನ ಕರಸ್ಥಲಕ್ಕೆ ಬಂದಿರಲು
ಕಂಡು ಹಗರಣವಾಯಿತ್ತೆನಗೆ,
ಗುರು, ಲಿಂಗ, ಜಂಗಮ ಸ್ವರೂಪವಾಗಿ ಮೂರ್ತಿಗೊಂಡಿತ್ತು ನೋಡಾ
ಆಹಾ ಎನ್ನ ಪುಣ್ಯವೆ! ಆಹಾ ಎನ್ನ ಭಾಗ್ಯವೆ! ಆಹಾ ಅಖಂಡೇಶ್ವರ!

ಲಿಂಗಾಯತ ಧರ್ಮದ ಹೆಬ್ಬಾಗಿಲು ಇಷ್ಟಲಿಂಗ ದೀಕ್ಷಾ ಸಂಸ್ಕಾರ. ಯಾವುದೇ ಜಾತಿ ಮತ ಪಂಥದಲ್ಲಿ ಹುಟ್ಟಿದ ವ್ಯಕ್ತಿ ಲಿಂಗಾಯತನಾಗಲಿಕ್ಕೆ ಇರುವ ಏಕೈಕ ಸಾಧನ ಇಷ್ಟಲಿಂಗ ದೀಕ್ಷೆ. ಇಷ್ಟಲಿಂಗ ದೀಕ್ಷೆಯಲ್ಲಿ ಸ್ವತಃ ವ್ಯಕ್ತಿಯೇ ಗುರುವಿನಿಂದ ಇಷ್ಟಲಿಂಗವನ್ನು ಪಡೆದು ಗುರುವಿನ ಹಸ್ತದಲ್ಲಿ ಹುಟ್ಟನ್ನು ಪಡೆದು, ಪುನರ್ಜನ್ಮ ತಾಳುತ್ತಾನೆ.

ವೈದಿಕರಲ್ಲಿ ದೀಕ್ಷಾ ಸಂಸ್ಕಾರವನ್ನು ಉಪನಯನ ಅಥವಾ ದ್ವಿಜ ಸಂಸ್ಕಾರ ಎನ್ನುತ್ತಾರೆ. ದ್ವಿ-ಎಂದರೆ ಎರಡು, ಜ-ಎಂದರೆ ಜನನ ಎಂದು ಅರ್ಥ. ಎರಡನೇ ಸಲ ಜನ್ಮ ತಾಳುವುದೇ ದ್ವಿಜ. ಸಿಖ್ ಧರ್ಮದಲ್ಲಿ ಅವರ ಧರ್ಮದ ದೀಕ್ಷೆಗೆ 'ಪಾಹುಲ್' ಎಂದು ಕರೆದು ಈ ಸಂಸ್ಕಾರಕ್ಕೆ ಒಳಗಾದವನು ಮಾತ್ರ ನಿಜವಾದ ಸಿಖ್ ಎನ್ನುವ ನಂಬಿಕೆ ಅವರದು. ಅದೇ ರೀತಿ ಕ್ರಿಶ್ಚಿಯನ್ ಧರ್ಮದಲ್ಲಿ ದೀಕ್ಷಾ ಸಂಸ್ಕಾರಕ್ಕೆ ''ಬ್ಯಾಪ್ಟಿಸಮ್'' (Baptism) ಎಂದು ಕರೆದರೆ ಇಸ್ಲಾಂ ಧರ್ಮಿಯರು ''ಸುನ್ನತಿ'' ಎಂದು ಕರೆಯುತ್ತಾರೆ. ಈ ರೀತಿ ಎಲ್ಲಾ ಪ್ರವಾದಿ ಧರ್ಮಗಳಲ್ಲಿಯೂ

ಆಯಾ ಧರ್ಮಗಳ ದೀಕ್ಷಾ ಸಂಸ್ಕಾರ ವಿಧಿ ವಿಧಾನಗಳಿವೆ ಅದೇ ರೀತಿ ಲಿಂಗಾಯತ ಧರ್ಮದ ದೀಕ್ಷಾ ಸಂಸ್ಕಾರವೇ ''ಇಷ್ಟಲಿಂಗ ದೀಕ್ಷೆ''. ವೈದಿಕ ಧರ್ಮದಲ್ಲಿ 8ನೇ ವಯಸ್ಸಿಗೆ ಗಂಡು ಮಕ್ಕಳಿಗೆ ಉಪನಯನ ಸಂಸ್ಕಾರಕ್ಕೆ ಬಹಳ ಮಹತ್ವ ನೀಡುತ್ತಾರೆ. ಆಹ್ವಾನ ಪತ್ರಿಕೆ ಮುದ್ರಿಸಿ ಬಂಧು ಬಳಗದವರನ್ನೆಲ್ಲಾ ಈ ಕಾರ್ಯಕ್ರಮಕ್ಕೆ ಆಹ್ವಾನಿಸುವರು. ಇದರಿಂದ ಅವರ ಸಹಧರ್ಮೀಯರೂ ಉಪನಯನದ ಮಹತ್ವ ಅರಿತು, ಅವರೂ ಆಚರಿಸುತ್ತಾರೆ. ಲಿಂಗಾಯತ ಧರ್ಮೀಯರಲ್ಲಿಯೂ ಈ ರೀತಿಯ ಜಾಗೃತಿಯುಂಟಾಗುವುದು ಅವಶ್ಯವಾಗಿದೆ. ಈಗೀಗ ಅನೇಕರು ಇಷ್ಟಲಿಂಗ ದೀಕ್ಷೆ ಪಡೆಯುತ್ತಿದ್ದರೂ ಇನ್ನೂ ಹೆಚ್ಚಿನ ಜನರು ಇದರಿಂದ ಬಹುದೂರ ಉಳಿದಿದ್ದಾರೆ. ಅದಕ್ಕಾಗಿ ಆರ್ಥಿಕವಾಗಿ ಅನುಕೂಲವಿರುವವರು, ತಮ್ಮ ಮಕ್ಕಳಿಗೆ ದೀಕ್ಷೆ ಕೊಡಿಸುವಾಗ ಆಹ್ವಾನ ಪತ್ರಿಕೆಗಳನ್ನು ಮುದ್ರಿಸಿ ಬಂಧು, ಬಾಂಧವರು, ಮಿತ್ರರನ್ನು ಕರೆದು ಗುರುಗಳನ್ನು ಆಹ್ವಾನಿಸಿ, ಮಕ್ಕಳಿಗೆ ದೀಕ್ಷಾ ಸಂಸ್ಕಾರ ಕೊಡಿಸಬೇಕು. ಇದರಿಂದ ಇತರರೂ ದೀಕ್ಷಾ ಸಂಸ್ಕಾರದ ಮಹತ್ವವನ್ನು ಅರಿತುಕೊಳ್ಳುತ್ತಾರೆ. ಆರ್ಥಿಕವಾಗಿ ಅನಾನುಕೂಲವಿರುವವರು ಗುರುಗಳು ಇರುವ ಕಡೆಗೆ ಹೋಗಿ ದೀಕ್ಷೆ ತೆಗೆದುಕೊಳ್ಳಬಹುದು.

ತಾಯಿ - ತಂದೆಯರಿಂದ ಮಾಂಸಪಿಂಡವಾಗಿ ಹುಟ್ಟಿದ ಈ ದೇಹ (ಗರ್ಭಲಿಂಗಧಾರಣೆಯಾದರೆ ಮಂತ್ರ ಪಿಂಡವಾಗಿಯೇ ಹುಟ್ಟುತ್ತದೆ) ಸದ್ಗುರುವಿನ ಹಸ್ತದಲ್ಲಿ ಹುಟ್ಟಿದಾಗ ಮಂತ್ರ ಪಿಂಡವಾಗುತ್ತದೆ. ''ಹುಟ್ಟಿದೆ ಶ್ರೀ ಗುರುವಿನ ಹಸ್ತದಲ್ಲಿ'' ಎನ್ನುವ ಗುರು ಅಕ್ಕಮಹಾದೇವಿಯವರ ವಚನದಲ್ಲಿ ಈ ಭಾವವೇ ವ್ಯಕ್ತವಾಗಿದೆ.

ವ್ಯಕ್ತಿ, ಲಿಂಗಾಯತರಾದ ತಾಯಿ-ತಂದೆಗಳಿಂದ ಜನ್ಮ ಪಡೆದರೂ, ಧರ್ಮದ ಅನುಯಾಯಿತ್ವ ತನ್ನಿಂದ ತಾನೆ ಬರಲಾರದು. ತಂದೆ ಇಂಜನಿಯರ್ ಆದ ಮಾತ್ರಕ್ಕೆ ಅವನ ಮಕ್ಕಳು ಇಂಜನಿಯರ್ ಆಗಲಾರರು; ಅವರೂ ಕೂಡ ಡಿಪ್ಲಮೋ, ಬಿ.ಇ. ಪದವಿಧರರಾಗಲೇ ಬೇಕು. ಅದೇ ರೀತಿ ಒಬ್ಬ ಕೂಲಿ ಕಾರ್ಮಿಕನ ಮಗ ಕೂಲಿ ಕಾರ್ಮಿಕನಾಗಲೇ ಬೇಕು ಎಂದೇನಿಲ್ಲ. ಅವನು ಕೂಡ ಡಿಪ್ಲಮೋ, ಬಿ.ಇ. ಪದವಿಗಳನ್ನು ಪಡೆದುಕೊಂಡರೆ ಇಂಜನಿಯರ್ ಆಗುತ್ತಾನೆ. ಅದೇ ರೀತಿ ಲಿಂಗಾಯತ ತಾಯಿ - ತಂದೆಯರಿಗೆ ಹುಟ್ಟಿದ ಮಾತ್ರಕ್ಕೆ ಲಿಂಗದೀಕ್ಷೆ ಪಡೆದುಕೊಳ್ಳದೇ ಇರುವವರನ್ನು ಲಿಂಗಾಯತರೆಂದು ಕರೆಯಲಾಗದು. ಅವರು ಕೂಡ ಸದ್ಗುರುವಿನಿಂದ ಇಷ್ಟಲಿಂಗ ದೀಕ್ಷೆಯನ್ನು ಪಡೆಯಲೇ ಬೇಕು. ಅದೇ ರೀತಿ ಯಾವುದೇ ಜಾತಿ, ಮತ, ಅಧಿಕಾರ ಅಂತಸ್ತುಗಳ ಭೇದವಿಲ್ಲದೆ ಯಾರು ಬೇಕಾದರೂ ಇಷ್ಟಲಿಂಗ ದೀಕ್ಷೆ ಹೊಂದಿ ಲಿಂಗಾಯತರಾಗಬಹುದು.

ಕೇವಲ ತಾನು ಇಷ್ಟಲಿಂಗ ದೀಕ್ಷೆ ಸಂಸ್ಕಾರ ಹೊಂದಿ ಲಿಂಗಾಯತನಾದರೆ ಸಾಲದು ಇತರರಿಗೂ ಕೂಡ ಇದರ ಮಹತ್ವವನ್ನು ತಿಳಿ ಹೇಳಿ ಲಿಂಗದೀಕ್ಷೆ ತೆಗೆದುಕೊಳ್ಳುವಂತೆ ಮಾಡಿದರೆ ಜೀವನದಲ್ಲಿ ಒಂದು ಒಳ್ಳೆಯ, ಪುಣ್ಯದ ಕಾರ್ಯ ಮಾಡಿದಂತಾಗುತ್ತದೆ. ಇಷ್ಟಲಿಂಗ ದೀಕ್ಷೆಯ ಮಹತ್ವ ಅರಿತು ಇದನ್ನು ಪಡೆದುಕೊಂಡ ವ್ಯಕ್ತಿಯಂತೂ ನಿಮ್ಮ ಬಗ್ಗೆ ಧನ್ಯತೆಯ ಭಾವ ಹೊಂದುತ್ತಾನೆ. ಅವನೆಂದಿಗೂ ಜನ್ಮದಲ್ಲಿ ನಿಮ್ಮನ್ನು ಮರೆಯದೆ ಕೊಂಡಾಡುತ್ತಲೇ ಇರುತ್ತಾನೆ.

ನರಜನ್ಮವ ತೊಡೆದು ಹರಜನ್ಮ ಮಾಡುವಂಥ, ಭವಿತನವನ್ನು ತೊಡೆದುಹಾಕಿ ಭಕ್ತನನ್ನಾಗಿ ಮಾಡುವಂಥ, ಭವ ಬಂಧನವನ್ನು ತೊಡೆದುಹಾಕಿ ಪರಮ ಸುಖವನ್ನು ತೋರುವಂಥದ್ದು ಈ ಇಷ್ಟಲಿಂಗ ದೀಕ್ಷೆ. ಹಾಗಾದರೆ ಇಂಥ ಇಷ್ಟಲಿಂಗ ದೀಕ್ಷೆ ಸಂಸ್ಕಾರವನ್ನು ವ್ಯಕ್ತಿ ಯಾವಾಗ ತೆಗೆದುಕೊಳ್ಳಬೇಕು? ಮದುವೆಯಾಗುವಾಗಲೋ? ವಯಸ್ಸಾದ ಮೇಲೋ? ಅಥವಾ ಸತ್ತ ಮೇಲೋ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ನೀಡುತ್ತದೆ ಗುರು ಅಕ್ಕಮಹಾದೇವಿ ತಾಯಿಯವರ ಈ ವಚನ :

ಉರಕ್ಕೆ ಜವ್ವನಗಳು ಬಾರದ ಮುನ್ನ,

ಮನಕ್ಕೆ ನಾಚಿಕೆಗಳು ತೋರದ ಮುನ್ನ,
ನಮ್ಮವರಂದೆ ಮದುವೆಯ ಮಾಡಿದರು; ಚೆನ್ನ ಮಲ್ಲಿಕಾರ್ಜುನಂಗೆ
ಹೆಂಗೂಸೆಂಬ ಭಾವವ ತೋರದ ಮುನ್ನ
ನಮ್ಮವರಂದೆ ಮದುವೆಯ ಮಾಡಿದರು

ಯೌವ್ವನ ಎನ್ನುವಂಥದ್ದು ಬರುವುದಕ್ಕಿಂತ ಮುಂಚೆಯೇ, ದೀಕ್ಷೆಯಾಗಬೇಕು. ಸಾಮಾನ್ಯವಾಗಿ ಹೆಣ್ಣುಮಕ್ಕಳು ದೊಡ್ಡವರಾಗುವುದಕ್ಕಿಂತ ಮುಂಚೆ ಎಲ್ಲರೊಂದಿಗೆ ಬೆರೆತು ಗಂಡು ಹೆಣ್ಣು ಎನ್ನುವ ಭಾವವಿಲ್ಲದೆ, ಲಜ್ಜೆ ನಾಚಿಕೆ ಏನೊಂದು ಇಲ್ಲದೆ ಗಂಡು ಮಕ್ಕಳೊಂದಿಗೆ ಬೆರೆತು ಹೆಣ್ಣು ಮಕ್ಕಳು ಆಟ ಆಡುತ್ತಾರೆ. ಆದರೆ ದೊಡ್ಡವರಾದ ಮೇಲೆ ಅವರಲ್ಲಿ ದೈಹಿಕ ಪರಿವರ್ತನೆಯ ಜೊತೆ ಜೊತೆಗೆ ಮಾನಸಿಕ ಪರಿವರ್ತನೆಯೂ ಕೂಡ ಆಗುತ್ತದೆ. ಆಗ ಮನಕ್ಕೆ ನಾಚಿಕೆಗಳು ಉಂಟಾಗುತ್ತವೆ. ಹೆಂಗೂಸು, ಗಂಡುಗೂಸು ಎನ್ನುವ ಭಾವ ತೋರುವುದಕ್ಕಿಂತ ಮುಂಚೆಯೇ ದೀಕ್ಷೆ ಸಂಸ್ಕಾರವನ್ನು ಪಡೆಯಬೇಕು ಅಥವಾ ಮಕ್ಕಳಿಗೆ ಕೊಡಿಸಬೇಕು ಎನ್ನುವ ಮಹತ್ವಪೂರ್ಣವಾದ ವಿಷಯವನ್ನು ಈ ವಚನ ಹೇಳುತ್ತಿದೆ. ಅಂದರೆ ಹೆಣ್ಣು ಮಕ್ಕಳಿಗೆ ಅವರು ದೊಡ್ಡವರಾಗುವುದಕ್ಕಿಂತ ಮುಂಚೆಯೇ ದೀಕ್ಷೆಯಾಗಬೇಕು. ತೀರ ಚಿಕ್ಕ ವಯಸ್ಸಿನಲ್ಲಾದರೆ ಅವರಿಗೆ ಅಷ್ಟೊಂದು ಅರಿವಿರುವುದಿಲ್ಲ. 8-9 ವರ್ಷಕ್ಕೆಲ್ಲ ಅರಿವು ಎನ್ನುವಂಥದ್ದು ಬರಲು ಆರಂಭಿಸುತ್ತದೆ ಅದಕ್ಕಾಗಿ 10 ವರ್ಷ ವಯಸ್ಸಿನ ಒಳಗೆ ಗಂಡು ಮಗುವೇ ಇರಲಿ ಹೆಣ್ಣು ಮಗುವೇ ಇರಲಿ ದೀಕ್ಷೆ ಮಾಡಿಸಲೇ ಬೇಕು. ಇಲ್ಲಿ ತಾಯಿ-ತಂದೆಗಳ ಜವಾಬ್ದಾರಿ ಬಹಳ ಮುಖ್ಯವಾದುದು. ಮಕ್ಕಳು ಪೂಜೆ ಧ್ಯಾನ ಮಾಡುವುದರಿಂದ ಅವರಲ್ಲಿ ಏಕಾಗ್ರತೆ ಹೆಚ್ಚಾಗಿ ಅವರ ವಿದ್ಯಾಭ್ಯಾಸಕ್ಕೂ ಹೆಚ್ಚು ಉಪಯುಕ್ತವಾಗುತ್ತದೆ. ಮಕ್ಕಳಲ್ಲಿ ಸಹಜವಾಗಿ ಇರುವ ತುಂಟತನಗಳು ಮಾಯವಾಗಿ ಅವರಲ್ಲಿ ಶಾಂತತೆ ಅಳವಡುತ್ತದೆ. ಬಾಲ್ಯದಲ್ಲಿಯೇ ದೀಕ್ಷೆ ಹೊಂದಿ ಪೂಜೆ ಮಾಡುವ ಮಕ್ಕಳು ಇತರ ಮಕ್ಕಳಿಗಿಂತ ಭಿನ್ನವಾಗಿರುತ್ತಾರೆ ಮಾತ್ರವಲ್ಲ ಜ್ಞಾನಿಗಳಾಗಿರುತ್ತಾರೆ.

9-10 ವರ್ಷದ ಮಕ್ಕಳಿಗೆ ದೀಕ್ಷೆ ಕೊಡಿಸುವುದರಲ್ಲಿ ಇನ್ನೊಂದು ಮಹತ್ವಪೂರ್ಣವಾದ ಅಂಶವಿದೆ. ಆ ಎಳೆಯ ಮಕ್ಕಳ ಮನಸ್ಸು ತುಂಬಾ ಶುಭ್ರ ಮತ್ತು ತಿಳಿಯಾಗಿರುತ್ತದೆ. ಅಲ್ಲಿ ಕಾಮ-ಕ್ರೋಧಗಳಿಲ್ಲ, ಮೋಹ-ಲೋಭಗಳಿಲ್ಲ, ಮದ-ಮತ್ಸರ, ರಾಗ-ದ್ವೇಷಗಳು ಇರುವುದಿಲ್ಲ. ಇಂಥ ಪರಿಶುದ್ಧವಾದ ಮನಸ್ಸಿನಿಂದ ಇಷ್ಟಲಿಂಗ ಪೂಜೆ ಮಾಡಿದಾಗ ಪರಮಾತ್ಮನ ಒಲುಮೆಯಾಗುತ್ತದೆ, ಮುಂದೆ ಆ ಮಕ್ಕಳು ಸತ್ಪ್ರಜೆಗಳಾಗಿ, ಲಿಂಗಾಯತ ಧರ್ಮದ, ಭಾರತದೇಶದ, ಮಾನವ ಜನಾಂಗದ ಆಸ್ತಿಯಾಗುತ್ತಾರೆ. ಅತ್ಯಂತ ಚಿಕ್ಕ ವಯಸ್ಸಿನಲ್ಲಿ ತಮ್ಮ ಮುಗ್ಧ ಭಕ್ತಿಯಿಂದ ಪರಮಾತ್ಮನನ್ನು ಒಲಿಸಿಕೊಂಡ ಅನೇಕ ಮಕ್ಕಳ ಉದಾಹರಣೆಗಳು ನಮ್ಮೆದುರಿಗೆ ಇವೆ. ಧ್ರುವ, ಕೊಳೂರು ಕೊಡಗೂಸು, ಪ್ರಹ್ಲಾದ, ಸಿಂಡರೆಲಾ, ಚನ್ನಬಸವಣ್ಣ, ಅಕ್ಕಮಹಾದೇವಿ ಇಂಥ ಅನೇಕರು ಚಿಕ್ಕ ವಯಸ್ಸಿನಲ್ಲಿಯೇ ತಮ್ಮ ಭಕ್ತಿಯ ಪರಾಕಾಷ್ಠೆಯನ್ನು ಮುಟ್ಟಿರುವುದನ್ನು ಕಾಣುತ್ತೇವೆ. ಅದಕ್ಕಾಗಿ ತಂದೆ ತಾಯಂದಿರು ತಮ್ಮ ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿಯೇ ದೀಕ್ಷೆ ಕೊಡಿಸಬೇಕು. ನಮ್ಮ ತಂದೆಯವರು ನನಗೆ 10-12 ವರ್ಷಕ್ಕೆಲ್ಲ ದೀಕ್ಷೆ ಕೊಡಿಸಿದ್ದರು, ಇಷ್ಟಲಿಂಗ ಕೈಯಲ್ಲಿ ಇಟ್ಟುಕೊಂಡು ಪೂಜೆ ಮಾಡುತ್ತಾ ಇದ್ದರೆ ಆಗಲೇ ತುಂಬಾ ಆನಂದವಾಗುತ್ತಿತ್ತು. ಏಕಾಗ್ರತೆ ಒಂದು ಓದಿದ್ದಲ್ಲಿ ಚೆನ್ನಾಗಿ ಅರ್ಥವಾಗುತಿತ್ತು. ಮಾತ್ರವಲ್ಲ ನೆನಪಿನಲ್ಲಿ ಉಳಿಯುತಿತ್ತು. ಹೀಗಾಗಿ 5ನೇ ತರಗತಿ ಮುಗಿಯುವಷ್ಟರಲ್ಲೇ ಗುರುಬಸವಣ್ಣನವರ 300 ವಚನಗಳನ್ನು ಕಂಠಪಾಠ ಮಾಡಿದ್ದೆ.

ಇಷ್ಟಲಿಂಗ ದೀಕ್ಷೆಯನ್ನು ಇನ್ನೂ ನೀವು ಪಡೆದುಕೊಂಡಿಲ್ಲವೇ ? ನಿಮ್ಮ ಮಕ್ಕಳಿಗೆ ಇನ್ನೂ ದೀಕ್ಷೆ ಮಾಡಿಸಿಲ್ಲವೇ ? ಇದಕ್ಕಾಗಿ ತಡವೇಕೆ ? ಈಗಲೇ ದೀಕ್ಷೆ ತೆಗೆದುಕೊಳ್ಳುವ ಸಂಕಲ್ಪ ಮಾಡಿ. ಪೂಜ್ಯ ಮಾತಾಜಿಯವರು ಇದೇ ಶರಣಮೇಳದಲ್ಲಿ ದಿನನಿತ್ಯವೂ ಸುಪ್ರಭಾತದಲ್ಲಿ ಇಷ್ಟಲಿಂಗ ದೀಕ್ಷೆ ಮಂತ್ರ ದೀಕ್ಷೆ ಕೊಡುತ್ತಾರೆ ತಡವೇಕೆ ದೀಕ್ಷೆ ಪಡೆದುಕೊಂಡು ಮೋಕ್ಷದ ದಾರಿಯಲ್ಲಿ ಸಾಗುವಂತಾಗುವಿರೆಂದು ನಂಬುತ್ತೇವೆ.

ಉದಾರ ದೇಣಿಗೆಗಾಗಿ ಮನವಿ

ಶರಣ ಬಂಧುಗಳೇ,

ಶರಣ ಭೂಮಿ ಬಸವ ಕಲ್ಯಾಣದಲ್ಲಿ ರೂಪುಗೊಳ್ಳುತ್ತಿರುವ 108 ಅಡಿ ಪುತ್ಥಳಿಯ ಕೆಲಸವು ಭರದಿಂದ ಸಾಗಿದೆ. ಒಂದೂವರೆ ಕೋಟಿ ರೂಗಳ ವೆಚ್ಚದ ಅಂದಾಜಿನೊಡನೆ ಪ್ರಾರಂಭವಾದ ಮೂರ್ತಿಯ ವೆಚ್ಚ ಈಗಾಗಲೇ 3 ಕೋಟಿ ದಾಟಿದೆ. ಇದಕ್ಕೆ ಪೋಷಕವಾಗಿ ಕೆಲವು ಖರ್ಚುಗಳು ಬರುತ್ತವೆ. ಕೆಲಸ ಆರಂಭಿಸಿದಾಗ ಇದ್ದ ಸಿಮೆಂಟ್, ಕಬ್ಬಿಣದ ರೇಟು ಮೂರುಪಟ್ಟು ಹೆಚ್ಚಿದೆ. ಮೂರ್ತಿಯ ಆಕಾರ ಸ್ಪಷ್ಟ ರೂಪ ತಾಳುತ್ತಲಿದೆ. ಮೂರ್ತಿಯ ಕೆಲಸದ ಜೊತೆಗೆ ಅದರ ಮುಂಭಾಗದ ಕೆಲಸ, ಏರುವ ಮತ್ತು ಇಳಿಯುವ ಮೆಟ್ಟಲುಗಳ ಕೆಲಸ, ಮುಂದಿನ ಐಕ್ಯ ಮಂಟಪದ ಕೆಲಸ, ಜೊತೆ ಜೊತೆಗೆ ಬಸವ ಧ್ಯಾನ ಮಂಟಪ ಗವಿ, ಅಕ್ಕಮಹಾದೇವಿ ಗವಿ- ಇವುಗಳ ಕೆಲಸವೂ ಭರದಿಂದ ಸಾಗಿದೆ. ಹೀಗಾಗಿ ಹಣದ ಅವಶ್ಯಕತೆ ಬಹಳವಾಗಿದೆ.

1. ಶರಣ ಬಂಧುಗಳೇ ಸಾಧ್ಯವಾದಷ್ಟೂ ಕಾಣಿಕೆಯ ರೂಪದಲ್ಲಿ ನಿಮ್ಮ ಉದಾರವಾದ ದೇಣಿಗೆಯನ್ನು ಕೊಡಿರಿ. ಶರಣ ಮೇಳಕ್ಕೆ ಬರುವಾಗ ತನ್ನಿರಿ.

2. ಶರಣ ಮೇಳದ ದೇಣಿಗೆ ಸಂಗ್ರಹವನ್ನು ನಿಷ್ಠೆಯಿಂದ ಮಾಡಿರಿ. ಕಾರಣಾಂತರದಿಂದ ರಸೀತಿ ಪುಸ್ತಕ ಬಂದಿಲ್ಲದಿದ್ದರೆ ಫೋನ್ ಮಾಡಿ ರಸೀತಿ ಪುಸ್ತಕ ತರಿಸಿಕೊಂಡು ನಿಷ್ಠೆಯಿಂದ ಸಂಗ್ರಹಿಸಿರಿ. ಎಲ್ಲರೂ ನಿಷ್ಠೆಯಿಂದ ಜೋಪಾನವಾಗಿ ಖರ್ಚುಮಾಡುವ ಹಂಬಲ ಉಳ್ಳ ಪ್ರಾಮಾಣಿಕರು. ಜೋಪಾನವಾಗಿ, ಮಿತವಾಗಿ ಖರ್ಚುಮಾಡಿ ಉಳಿಯುವ ಹಣವನ್ನು ಕಟ್ಟಡನಿಧಿಗೆ, 108 ಅಡಿ ಮೂರ್ತಿಗಾಗಿ ಬಳಸಿಕೊಳ್ಳಲಾಗುವುದು.

3. ಮೆಟ್ಟಲು ಯೋಜನೆ: ಏರಲು 108; ಇಳಿಯಲು 108 ಮೆಟ್ಟಲು ಮಾಡಲಾಗುತ್ತಿದೆ. 10 ಅಡಿ ಉದ್ದದ ಮೆಟ್ಟಲಿಗೆ ಗ್ರ್ಯಾನೈಟ್ ಹಾಕಿಸಲಾಗುವುದು. ಒಂದು ಮೆಟ್ಟಲಿಗೆ 15 ಸಾವಿರ ರೂ ಖರ್ಚು ಬರುವುದು. ಈ ಮೊತ್ತ ಕೊಟ್ಟ ದಾನಿಗಳ ಹೆಸರನ್ನು ಮೆಟ್ಟಲಿನ (ನಿಲ್ಲಿಸಿದ ಭಾಗ) ಮೇಲೆ ಕೆತ್ತಿಸಲಾಗುವುದು.

4. ಬಸವ ಧ್ಯಾನ ಮಂಟಪದ ಗವಿಯೊಳಗೆ ಪುನಃ ಒಳಗವಿಗಳನ್ನು ಮಾಡಲಾಗಿದ್ದು ಅಲ್ಲಿ ಪ್ರಮುಖ ಶರಣರ ಮೂರ್ತಿಗಳನ್ನು ಇರಿಸಲಾಗಿದೆ. ಈ ಒಳಗವಿಗಳಿಗೆ ಗ್ರ್ಯಾನೈಟ್ ಕಲ್ಲಿನ ಬಾಗಿಲ ವಾಡವನ್ನು ಕೂರಿಸಲಾಗುತ್ತಿದೆ. ಕಲ್ಲಿನ ಬಾಗಿಲುವಾಡ ಒಂದಕ್ಕೆ 25000 (ಇಪ್ಪತ್ತೈದು ಸಾವಿರ) ರೂ ವೆಚ್ಚ ತಗುಲಿದೆ. 25000 ಕೊಟ್ಟವರ ಹೆಸರನ್ನು ಬಾಗಿಲುವಾಡದ ಮೇಲೆ ಕೆತ್ತಿಸಲಾಗುವುದು.

5. ವಿಶ್ವಕಲ್ಯಾಣ ಮಿಷನ್, ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಬೆಂಗಳೂರು, ಧಾರವಾಡ, ಕೂಡಲ ಸಂಗಮ, ಬಸವ ಕಲ್ಯಾಣ, ಬೀದರ - ಈ 5 ಸ್ಥಳಗಳಲ್ಲಿ ಅನಾಥಾಲಯಗಳು, ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಅನಾಥಾಲಯ, ವೃದ್ಧಾಶ್ರಮ ನಡೆಸಲಾಗುತ್ತಿದೆ. ಮಾನವೀಯ ದೃಷ್ಟಿಯಿಂದ ಆರ್ಥಿಕ ಸಹಾಯ ಮಾಡಲು ಅವಕಾಶ ಉಂಟು.

6. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟಿಗೆ 80 ಜಿ ಇನ್‌ಕಮ್ ಟ್ಯಾಕ್ಸ್ ರಿಯಾಯಿತಿ ಇದೆ. ಅಗತ್ಯವಿರುವವರು ಉಪಯೋಗಿಸಿಕೊಳ್ಳಬಹುದು.

ತಮ್ಮ ತಮ್ಮ ಶಕ್ತ್ಯಾನುಸಾರ ಬಸವ ಧರ್ಮ ಪೀಠದ ಕಾರ್ಯಗಳಿಗೆ, ಕಟ್ಟಡ ನಿರ್ಮಾಣಕ್ಕೆ ಕಾಣಿಕೆಯನ್ನು ಸಲ್ಲಿಸಲು ಮನಸ್ಸು ಮಾಡಬೇಕೆಂದು ಶರಣ ಬಂಧುಗಳಲ್ಲಿ ವಿನಂತಿ.

-ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಲಿಂಗಾಯತ ಧರ್ಮ ಸಂವಿಧಾನಕ್ಕೆ ಗುರು ಸಿದ್ಧರಾಮೇಶ್ವರರ ಕೊಡುಗೆ

(ದಿನಾಂಕ 15-1-2011) ರಂದು ಬಂದಿರುವ ಸಿದ್ಧರಾಮೇಶ್ವರರ ಜಯಂತಿ ನಿಮಿತ್ತ ವಿಶೇಷ ಲೇಖನ)

-ಸಚ್ಚಿದಾನಂದ ಚಟನಳ್ಳಿ

ಕಂತುವನೆ ಕಂಗೆಡಿಸಿಯೊಳಪೊ
ಕ್ಕಂತರಂಗವಿಚಾರವೆಲ್ಲವ
ಸಂತೆಯಂಗಡಿಯಂತೆ ಸೊನ್ನಲಪುರದೊಳೂಡ್ಡಯಿಸಿ
ಚಿಂತಿತಾರ್ಥವನರ್ತಿಗಿತ್ತು ನಿ
ರಂತರಖಿಳರಿಗರಿವನೀವ ಮ
ಹಂತನೆನಿಸಿದ ಸಿದ್ಧರಾಮಯ್ಯಂಗೆ ಶರಣಾರ್ಥಿ.

ಗುರು ಸಿದ್ಧರಾಮೇಶ್ವರರು ಲಿಂಗಾಯತ ಧರ್ಮ ಪಥಕ್ಕೆ ಬಂದ ಬಳಿಕ ಅವರ ವರ್ತನೆಯೇ ನಮಗೆಲ್ಲರಿಗೆ ಒಂದು ಬಹು ದೊಡ್ಡ ಉಪದೇಶವಾಗುತ್ತದೆ. ಅವರಲ್ಲಿದ್ದ ವಿನಯಶೀಲ ಗುಣ, ಒಳ್ಳೆಯದನ್ನು ಕಂಡು ಮೆಚ್ಚಿಕೊಳ್ಳುವ ಗುಣ, ಹೊಸದಾದ ತತ್ವವನ್ನು ಕಂಡಾಗ ಹಳೆಯ ಆಚರಣೆಯನ್ನು ನಿರ್ದಾಕ್ಷಿಣ್ಯವಾಗಿ ಬಿಟ್ಟು ಕೊಡುವ ಗುಣ ಅವರಲ್ಲಿ ವಿಶೇಷವಾಗಿ ಕಾಣುತ್ತೇವೆ. ಅವರಿಗೆ ಇಷ್ಟಲಿಂಗ ಮಹತ್ವ ತಿಳಿದ ತಕ್ಷಣವೇ ಕಪಿಲಸಿದ್ಧ ಮಲ್ಲಿಕಾರ್ಜುನ (ಸ್ಥಾವರ ಲಿಂಗ)ನನ್ನು ಬಿಟ್ಟು ಯೋಗಿನಾಥ (ಇಷ್ಟಲಿಂಗ)ನನ್ನು ಹೇಗೆ ಅಪ್ಪಿಕೊಂಡರು ಎನ್ನುವುದಕ್ಕೆ ಅವರ ವಚನವೊಂದು ಸಾಕ್ಷಿಯಾಗಿ ನಿಂತಿದೆ.

ಎಲ್ಲಾ ಪ್ರಮಥರು ಲಿಂಗವ ಧರಿಸುತ್ತಿರಲು
ನಾನು ಒಲ್ಲೆನೆಂಬುದು ಕರ್ಮದ ಬಲೆಯೋ, ಮಾಯದ ಬಲೆಯೋ ?
ಎಲೆ ಕಪಿಲಸಿದ್ಧ ಮಲ್ಲಿನಾಥಯ್ಯಾ, ನಾ ಧರಿಸಿಕೊಂಬುವೆ ಲಿಂಗವ
ನೀ ಕರೆಸಿಕೊಂಬುವನಾಗು ಮರ್ತ್ಯೋರ್ವನ ನಿನ್ನ ಪೂಜೆಗೆ
ನಾ ನಿನ್ನವನಲ್ಲೆಲೆ ದೇವಾ.

ಈ ರೀತಿ ಸ್ಥಾವರ ಲಿಂಗ ಪೂಜಕರಾದವರು, ಇಷ್ಟಲಿಂಗ ಪೂಜಕರಾಗಿ ಲಿಂಗಾಯತರಾದರು. ಮೊದಲು ಅವರು ಹೋಮ, ಹವನಗಳನ್ನು ಮಾಡುತ್ತಿದ್ದರು ಎಂದು ಅವರ ವಚನಗಳಿಂದ ತಿಳಿದು ಬರುತ್ತದೆ. ಆದರೆ ಶರಣ ಪಥಕ್ಕೆ ಬಂದ ಮೇಲೆ ಹೋಮ ಮಾಡಿದರೆ ತಲೆ ದಂಡ ಎನ್ನುತ್ತಾರೆ ಮಾತ್ರವಲ್ಲ ನಮಗೂ ಕೂಡ ಹೋಮವನ್ನು ಮಾಡಬಾರದು ಎಂದು ಆ ಮೂಲಕವಾಗಿ ಆಜ್ಞೆ ಮಾಡಿದ್ದಾರೆ.

'ಲಿಂಗಾರ್ಚನಾತ್ವದಂ ಪೂಜ್ಯಂ' ಎಂಬ ಶ್ರುತಿ
ಇಂದನುಭವಕ್ಕೆ ಬಂದಿತ್ತಯ್ಯಾ
'ಲಿಂಗಾಂಗಿ ಪರಮ ಶುಚಿಃ' ಎಂಬ
ಸಾಮವೇದ ಶಾಖೆ ಸಮನಿಸಿತ್ತಯ್ಯಾ
ಮುನ್ನ ಮಾಡಿದ್ದೇ ಮಾಡಿದೆ
ಹೋಮವನಿನ್ನು ಮಾಡಿದಡೆ ತಲೆದಂಡ
ಕಪಿಲಸಿದ್ಧ ಮಲ್ಲಿಕಾರ್ಜುನ.

ಶರಣರ ಮನೆಗಳು ಹೇಗಿರಬೇಕು ಎಂದು ತಮ್ಮ ವಚನಗಳಲ್ಲಿ ಈ ರೀತಿ ಹೇಳುತ್ತಾರೆ:

ಮನೆಯ ನೋಡಿದಡೆ ಮನ ಹೋಗುವಂತಾಗಬೇಕು

ಜನ ನೋಡಿದಡೆ ಕೀರ್ತಿವಂತರಾಗಬೇಕು
ನಿಮ್ಮ ಶರಣರ ಮನೆ ಹೊಕ್ಕೊಡೆ
ಮನವಳಿದು ಮನೋರಥ ಬಸವಣ್ಣನಂತಾಗಬೇಕು ಕೇಳಾ
ಕಪಿಲಸಿದ್ಧ ಮಲ್ಲಿಕಾರ್ಜುನ.

ಮನೆಯಲ್ಲಿ ನಾಯಿಗಳನ್ನು ಕಟ್ಟಿ ಮನೆ ಮುಂದೆ ನಾಯಿಗಳಿವೆ ಎಚ್ಚರಿಕೆ ಎನ್ನುವ ಸೂಚನಾ ಫಲಕವನ್ನು ಹಾಕಿದರೆ ಯಾರಿಗೆ ತಾನೆ ಮನೆ ಒಳಗೆ ಹೋಗಬೇಕೆನಿಸುತ್ತದೆ. ''ಶರಣು ಬನ್ನಿ'' ''ಶರಣು ಶರಣಾರ್ಥಿ'' ಎಂದು ಬರೆದ ಫಲಕಗಳನ್ನು ಹಾಕಿ ಮನೆಯ ಮೇಲೆ ಬಸವ ಧ್ವಜ ಹಾರಾಡುತ್ತಿದ್ದರೆ, ಶರಣರು ನಮ್ಮ ಮನೆಯೊಳಗೆ ಬಂದು ಮನದಲ್ಲಿ ನೆಲೆಸುತ್ತಾರೆ. ಅದಕ್ಕಾಗಿ ನಮ್ಮ ಮನೆಗಳೂ ಕೂಡ ಶರಣ ಸಂಸ್ಕೃತಿಯನ್ನು ಬಿಂಬಿಸಬೇಕು ಎಂದು ತಿಳಿಸುತ್ತಿದ್ದಾರೆ.

ಜಂಗಮನಾದವನು ಹೇಗಿರಬೇಕು ಎನ್ನುವುದನ್ನೂ ಮನ ಮುಟ್ಟುವ ರೀತಿಯಲ್ಲಿ ಹೇಳುತ್ತಾರೆ. ಅವರ ಈ ಉಪದೇಶವನ್ನು ಕರ್ನಾಟಕದಲ್ಲಿರುವ ಎಲ್ಲಾ ಮಠಾಧೀಶರೂ ಅಳವಡಿಸಿಕೊಂಡರೆ ಈ ದೇಶವನ್ನು ವಿಶ್ವದ ಶ್ರೇಷ್ಠ ದೇಶವಾಗಿ ಮಾಡುವುದು ಬಹು ಬೇಗನೆ ಸಾಧ್ಯವಾಗುತ್ತದೆ.

ಪರರಾಣಿಯರ ನೋಡುವಲ್ಲಿ ಅಂಧಕನಾಗಿಪ್ಪ ನೋಡಾ ಜಂಗಮನು
ಪರಧನ ಕಂಡಲ್ಲಿ ಹುಲಿಯ ಕಂಡ ಹುಲ್ಲೆಯಂತೆ,
ಭೀತಿ ಪಡುವ ನೋಡಾ ಜಂಗಮನು.
ದುರ್ಜನರ ಸಂಭಾಷಣೆಯ ಕೇಳುವಲ್ಲಿ ಅತಿ ಮೂರ್ಖನಾಗಿಪ್ಪ ನೋಡಾ ಜಂಗಮನು
ದುರಾತ್ಮರಿಗೆ ಜ್ಞಾನ ದ್ರವ್ಯವ ಕೊಡುವಲ್ಲಿ ಲೋಭಿಯಾಗಿಪ್ಪ ನೋಡಾ ಜಂಗಮನು
ಕಪಿಲಸಿದ್ಧ ಮಲ್ಲಿಕಾರ್ಜುನಾ.

ಬೀಸುವ ಗುಣದಿಂದ ಗಾಳಿ, ನೀರಡಿಕೆಯನ್ನು ನೀಗಿಸುವ ಗುಣದಿಂದ ನೀರು, ಸುಡುವ ಗುಣದಿಂದ ಬೆಂಕಿ ಎನಿಸಿಕೊಂಡಂತೆ, ಬೋಧಿಸುವ ಗುಣದಿಂದ ಜಂಗಮನೆನಿಸಿಕೊಳ್ಳಬೇಕು. ಎಂದು ಈ ದೇಶದ ಕಾವಿಧಾರಿಗಳು ಸುಧಾರಿಸುತ್ತಾರೋ ಅಂದು ಖಂಡಿತವಾಗಿಯೂ ಈ ದೇಶ ಸುಧಾರಿಸುತ್ತದೆ. ಹಿಂದೊಂದು ಕಾಲದಲ್ಲಿ ರಾಜರು ಗುರುಗಳ ಆಜ್ಞೆಯನ್ನು ಮೀರುತ್ತಿರಲಿಲ್ಲ, ಸಲಹೆ ಸೂಚನೆಗಳಿಗಾಗಿ ಮಠಕ್ಕೆ ಬರುತ್ತಿದ್ದರು. ಆದರೆ ಇಂದು, ಅನೇಕ ಮಠಾಧೀಶರು ಬೆಳಗಾದರೆ ರಾಜಕಾರಣಿಗಳ ಮನೆಬಾಗಿಲನ್ನು ಕಾಯುತ್ತಿರುವುದು ವಿಪರ್ಯಾಸದ ಸಂಗತಿ.

ನರಜನ್ಮಕ್ಕೆ ಬಂದ ಪ್ರತಿಯೊಬ್ಬ ಮಾನವನು ಗುರುವಿನ ಕರದಲ್ಲಿ ಅರಿವಿನ ಜನ್ಮವನ್ನು ಪಡೆದು ಕೊಳ್ಳಬೇಕು ಎನ್ನುತ್ತಾರೆ.

ನರ ಜನ್ಮಕ್ಕೊಮ್ಮೆ ಬಂದ ಬಳಿಕ
ಗುರುವಿನ ಕುರುಹ ಕಾಣಬೇಕು
ಗುರುವಿನ ಕುರುಹ ತಾ ಕಂಡ ಬಳಿಕ
ಶಿಷ್ಯನಾಗಿ ಗುರು ಕರಜಾತನಾಗಬೇಕು
ಕಪಿಲಸಿದ್ಧ ಮಲ್ಲಿಕಾರ್ಜುನನ ಪಾದ ಪದ್ಮದಲ್ಲಿ
ಐಕ್ಯವ ಗಳಿಸಬೇಕು ಘಟ್ಟಿವಾಳಯ್ಯ.

ಈ ರೀತಿ ಸಿದ್ಧರಾಮೇಶ್ವರರು, ತಾವು ವಯಸ್ಸಿನಲ್ಲಿ ಹಿರಿಯರಾದರೂ ಕೂಡ ಅನುಭಾವ ಮಂಟಪದ ಪ್ರತಿಯೊಬ್ಬ ಶರಣರನ್ನು ಹಾಡಿಕೊಂಡಾಡಿದ್ದಾರೆ. ಅವರ ವಿನಯ ಸದ್ಗುಣಗಳು ಎಂದೆಂದಿಗೂ ಅನುಕರಣೀಯವಾದವುಗಳು.

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ಬಸವ ಗುರುವಿನ ಉದ್ಘೋಷ ವಚನ ಮಂತ್ರಗಳು

1. ವಿಶ್ವಗುರು ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
2. ಮಹಾಮಾನವತಾವಾದಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
3. ಸ್ವತಂತ್ರ ವಿಚಾರವಾದಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
4. ಸಮತಾವಾದಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
5. ಲಿಂಗಾಯತ ಧರ್ಮಸಂಸ್ಥಾಪಕ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
6. ಧರ್ಮಗುರು ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
7. ಇಷ್ಟಲಿಂಗಜನಕ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
8. ಯುಗಪುರುಷ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
9. ಆದಿಪುರುಷ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
10. ಪ್ರಥಮಾಚಾರ್ಯ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
11. ಪೂರ್ವಾಚಾರಿ ಸಂಗನ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
12. ವಿಶ್ವಪೂಜ್ಯ ಜಗಜ್ಯೋತಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
13. ಭಕ್ತಿಭಂಡಾರಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
14. ಪಂಚಪರುಷ ಮೂರ್ತಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
15. ಮಹಾಕಾರಣಿಕ ಪುರುಷ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
16. ಜಗದಾರಾಧ್ಯ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
17. ವಚನ ಸಾಹಿತ್ಯ ಸಂವಿಧಾನ ಕರ್ತೃ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
18. ಸಚ್ಚಿದಾನಂದ ಸ್ವರೂಪಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
19. ಶರಣ ಪ್ರೇಮಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
20. ಸತ್ಯ ಸಾತ್ವಿಕನಿಧಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
21. ನಿತ್ಯ ನಿಜೈಕ್ಯ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
22. ಷಡುಸ್ಥಲ ಸಂಪನ್ನ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

23. ಸರ್ವಾಚಾರ ಸಂಪನ್ನ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

24. ಸುಜ್ಞಾನ ಭರಿತ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

25. ಸರ್ವಾಂಗಲಿಂಗಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

26. ನಿತ್ಯ ಪ್ರಸಾದಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

27. ಸದ್ಯೋನ್ಮುಕ್ತಿ ರೂಪ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

28. ಅಖಂಡ ಪರಿಪೂರ್ಣ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

29. ಅಕಾಯಚಾರಿತ್ರ್ಯ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

30. ಅನಾಮಯ ಮೂರ್ತಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

31. ಅಸಾಧ್ಯ ಸಾಧಕ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

32. ಅಭೇದ್ಯ ಭೇದಕ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

33. ಮಹಾಮನೆಯ ಮಾಡಿದ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

34. ರುದ್ರಲೋಕವ ಮರ್ತ್ಯಲೋಕಕ್ಕೆ ತಂದ ಬಸವಣ್ಣನವರಿಗೆ ಜಯವಾಗಲಿ
ಓಂ ಬಸವ

35. ಸರ್ವಾಂಗ ಪರಿಪೂರ್ಣಮೂರ್ತಿ ಬಸವಣ್ಣನವರಿಗೆ ಜಯವಾಗಲಿ
ಓಂ ಬಸವ

36. ಲಿಂಗಾಂಗಯೋಗಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

37. ಮಹಾಶಿವಯೋಗಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

38. ಕ್ರಾಂತಿಯೋಗಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

39. ಶ್ರೇಷ್ಠ ಸಮಾಜ ಸುಧಾರಕ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

40. ಶಿವಾಚಾರದ ಘನವ ಮೆರೆದ ಬಸವಣ್ಣನವರಿಗೆ ಜಯವಾಗಲಿ
ಓಂ ಬಸವ

41. ಮಂತ್ರಪುರುಷ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

42. ಪ್ರಣವ ಪುರುಷ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

43. ಮುಕ್ತಿದಾಯಕ ಮಹಾಗುರು ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

44. ಅಪ್ರತಿಮ ಯೋಗಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

45. ಭಕ್ತಿಕಾಂಡದ ಮೂಲಿಗ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

46. ಮಹಾಂತ ಮಹಾಗುರು ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

47. ಅನುಭವ ಮಂಟಪ ನಿರ್ಮಾತೃ ಬಸವಣ್ಣನವರಿಗೆ ಜಯವಾಗಲಿ
ಓಂ ಬಸವ

48. ಪರಮ ವಿರಕ್ತ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

49. ಸಂಸಾರಯೋಗಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

50. ಸ್ಥಿತಪ್ರಜ್ಞ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

51. ದಾರ್ಶನಿಕ ಶ್ರೇಷ್ಠ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

52. ದಾರ್ಶನಿಕ ದಿಗ್ಗಜ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

53. ಪವಾಡ ಪುರುಷ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

54. ಕಾಯಕಯೋಗಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

55. ಮಹಾದಾಸೋಹಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

56. ತ್ರಿವಿಧ ದಾಸೋಹಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

57. ಕಾರುಣ್ಯ ಮೂರ್ತಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

58. ಶರಣ ಜನ ಬಂಧು ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

59. ಜಂಗಮಪ್ರೇಮಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

60. ಏಕೇಶ್ವರವಾದಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

61. ಕಾಯಕ ತತ್ವ ಸಿದ್ಧಾಂತ ರೂಹಾರಿ ಬಸವಣ್ಣನವರಿಗೆ ಜಯವಾಗಲಿ
ಓಂ ಬಸವ

62. ಷಟಸ್ಥಲ ಕರ್ತೃ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

63. ಶರಣ ಗಣಾಧೀಶ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

64. ಭಕ್ತ ಗಣ ನಾಯಕ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

65. ಮಹಾನುಭಾವಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

66. ಪ್ರಸಾದ ತತ್ವದಾತ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

67. ಮಹಾ ಪ್ರಸಾದಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

68. ಜಂಗಮಮೂರ್ತಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

69. ಬಯಲುಬ್ರಹ್ಮ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

70. ಅಷ್ಟಾವರಣ ನಿಷ್ಠ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

71. ವಿರಾಟರೂಪಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

72. ಪರಿಶುದ್ಧ ಪರಿಪೂರ್ಣಚೇತನ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
73. ಚತುರ್ವಿಧ ಸ್ವಾಯತಮೂರ್ತಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
74. ಮಹಾಮಹಿಮ ಸಂಗನ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
75. ಅನುಭಾವ ಸಾಮ್ರಾಟ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
76. ಮಹಾಕಲ್ಯಾಣೇಶ್ವರ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
77. ಭಾಗ್ಯವಿಧಾತ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
78. ಮಾದರಸ ಮಾದಲಾಂಬಿಕಾನಂದನ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
79. ಗುರು ಸಾರ್ವಭೌಮ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
80. ವಿಶ್ವಬಂಧು ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
81. ದಿವ್ಯಸ್ಫೂರ್ತಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
82. ಬಹುಮುಖ ಪ್ರತಿಭೆಯ ಬಸವ ಭಾಸ್ಕರನಿಗೆ ಜಯವಾಗಲಿ ಓಂ ಬಸವ
83. ಕಲ್ಯಾಣರಾಜ್ಯ ನಿರ್ಮಾಪಕ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
84. ಶರಣ ಗಣ ಶಿಖಾಮಣಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
85. ಪಂಚಾಚಾರ ಕರ್ತೃ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
86. ಶೂನ್ಯ ಸಿಂಹಾಸನಾ ಕರ್ತೃ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
87. ತತ್ವನಿಷ್ಠ ಗಣಾಚಾರಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
89. ತತ್ವಜ್ಞಾನ ಶಿಖಾಮಣಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
90. ಭಕ್ತಿದಾಯಕ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
91. ಮರಣಭಯ ದೂರಕ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
92. ಪ್ರಥಮಗಣಾಧೀಶ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
93. ಸ್ತ್ರೀಕುಲೋದ್ಧಾರಕ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
94. ದಲಿತೋದ್ಧಾರಕ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
95. ಶಾಂತಿದೂತ ಧರ್ಮಪಿತ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
96. ಪತಿತೋದ್ಧಾರಕ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

97. ಶ್ರೇಷ್ಠ ಅರ್ಥಶಾಸ್ತ್ರಜ್ಞ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
98. ವಚನ ಸಾಹಿತ್ಯ ಸಾರ್ವಭೌಮ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
99. ನವ ಸಮಾಜ ನಿರ್ಮಾಪಕ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
100. ಅಹಿಂಸಾತತ್ವ ಪ್ರತಿಪಾದಕ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
101. ದುರಿತ ನಿವಾರಣ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
102. ತತ್ವಜ್ಞಾನ ವಿನಾಯಕ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
103. ವಿಶ್ವಕಲ್ಯಾಣ ಚಿಂತಕ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
104. ಚಿದ್‌ಬ್ರಹ್ಮ ವೃಕ್ಷ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
105. ಕೂಡಲಸಂಗಮ ಪುರಾಧೀಶ್ವರ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
106. ಮುಕ್ತಿಯ ಲಾಂಛನ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
107. ಭಕ್ತಿಯ ಲಾಂಛನ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ
108. ಮಹಾಪ್ರಸಾದಿ ಬಸವಣ್ಣನವರಿಗೆ ಜಯವಾಗಲಿ ಓಂ ಬಸವ

ವಿಶೇಷ ಸೂಚನೆ :

(ಅಕ್ಕಮಹಾದೇವಿ ವಚನ :- ಶಿವ ಶಿವ ಆದಿ ಅನಾದಿಗಳೆಂಬೆರಡಿಲ್ಲದ ನಿರವಯ ಶಿವ

ಹರಿಹರನು ಬಸವಣ್ಣನವರನ್ನು ಕುರಿತು ರಚಿಸಿದ ರಗಳೆ :- ಎಲೆ ಬಸವ ಬಸವಣ್ಣ ಬಸವೀದೇವ ನಿಮ್ಮ ನೇಮವಿದಾರ್ಗುಂಟು

ಬಸವ ದರ್ಶನ ಪುಸ್ತಕದಲ್ಲಿ ವಚನ ಸಂಖ್ಯೆ – 74, 75, 76, 46, 37, 09, 10, 38, 39, 55, 59, 76, 82, 90

ಇತ್ಯಾದಿ ವಚನಗಳ ಸಾಲುಗಳನ್ನು ಉಗ್ಘಡಿಸುವ ಮಧ್ಯೆ ಓಂ ಬಸವ ಓಂ ಬಸವ ಎಂದು ಸ್ಮರಿಸುತ್ತಾ ಮುಂದಿನ ವಚನ ಸಾಲುಗಳನ್ನು ಹೇಳಿದರೆ ದೈವೀಮಯವಾಗಿ ಚೆನ್ನಾಗಿರುತ್ತದೆಂದು ನನ್ನ ಭಾವನೆ. ಶರಣರು ಸಹಕರಿಸಬೇಕು.)

– ವನಜಾ ಶ್ರೀನಿವಾಸ, ಬೆಂಗಳೂರು

ಮಹಾಮನೆಯ ವೈಶಿಷ್ಟ್ಯ

ಬನ್ನಿ ಮಹಾಮನೆಯು ಕೈ ಬೀಸಿ ಕರೆಯುತಿದೆ
ಬಸವ ಸಂತಾನಕೆ ತಾಯ್ಮನೆಯ ನೀಡುತಿದೆ ॥ ಪ ॥
ಮಹಾಮನೆಯ ಭಕ್ತಿಸಿರಿ ಅನುಭವ ಮಂಟಪ
ಈ ಜಗದ ಐಸಿರಿ ಅರಿಯಿರಿ ನೀವೆಲ್ಲ ॥ ಅ. ಪ ॥

ನಮ್ಮಪ್ಪ ಬಸವಣ್ಣ ನಮ್ಮವ್ವ ನೀಲಮ್ಮ
ನಮ್ಮಣ್ಣ ಚಿನ್ಮಯ ಚನ್ನಬಸವಣ್ಣ
ನಮ್ಮ ದೊಡ್ಡಪ್ಪ ಅಲ್ಲಮಪ್ರಭುರಾಯ
ಪ್ರೇಮದ ಚಿಕ್ಕಪ್ಪ ಸಿದ್ಧರಾಮ ॥ 1 ॥

ಅಕ್ಕಮಹಾದೇವಿ ಪ್ರೇಮದ ಸೋದರಿ
ಚೊಕ್ಕ ಮಡಿವಾಳಯ್ಯ ಅಕ್ಕರೆಯ ಮಾವ
ಹರಳಯ್ಯ -ಮಧುವಯ್ಯ -ಮೋಳಿಗೆಯ ಮಾರಯ್ಯ ಈ
ಶರಣರೆಮ್ಮಯ ಬಂಧು ಬಳಗ ॥ 2 ॥

ಇಂಥ ಮಹಾಮನೆಯು ಜಗದೊಳೆಲ್ಲೂ ಇಲ್ಲ
ಅಂತೆಲ್ಲ ಧರ್ಮಗಳಲಿ ತಂದೆಯರು ಮಾತ್ರ
ಒಬ್ಬ ಗುರುವಿಗೆ ಅಲ್ಲಿ ಕೆಲವು ಶಿಷ್ಯಂದಿರು
ಬಸವ ಸೂರ್ಯನ ಸುತ್ತ ಶರಣ ಸಂದೋಹ ॥ 3 ॥

ಕಲ್ಯಾಣ ಮಹಾಮನೆಯು ಮರುಹುಟ್ಟು ಪಡೆದಿಹುದು
ಕೂಡಲ ಸಂಗಮದಿ ತಲೆ ಎತ್ತಿ ನಿಂತಿಹುದು
ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಎಂಬ ವಿಶ್ವ ಪ್ರೇಮ ಸಾರುತಿಹುದು ॥ 4 ॥

ಹುಟ್ಟನಿಂದಲಿ ನೀವು ಏನೇ ಇರಬಹುದು
ಸದ್ಯದ ಗುಣದಲಿ ಹೇಗೇ ಇರಬಹುದು
ಶರಣ ಮೇಳಕೆ ಬರಲು ಪರುಷದ ಸ್ಪರ್ಶ
ಅರಿವಿನ ಹೊನಲಿನಲಿ ಹೊಂದುವಿರಿ ಹರ್ಷ ॥ 5 ॥

ಕೂಡಲ ಸಂಗಮ ಧರ್ಮ ಕ್ಷೇತ್ರದಲ್ಲಿ
ನಡೆಯುತಿಹ ಮೇಳವು ತೌರಿನ ಹಬ್ಬ
ಬಸವ ಕಲ್ಯಾಣದಿ ಶರಣರನು ಸೇರಿಸಿ
ಕಲ್ಯಾಣ ಪರ್ವವು ತರುತಿದೆ ಉಬ್ಬ ॥ 6 ॥

ಮಹಾಮನೆಯ ಐಸಿರಿಯ ನೋಡಲು ಬನ್ನಿ
ವಚನಾಮೃತದ ಬುತ್ತಿಯ ಉಣ್ಣಲು ಬನ್ನಿ
ತತ್ವದ ಜ್ಯೋತಿಗಳು ಬೆಳಗುತಿಹವಿಲ್ಲಿ
ಸಚ್ಚಿದಾನಂದನ ಒಲುಮೆ ಪಡೆಯಲು ಬನ್ನಿ ॥ 7 ॥



ಲಿಂಗಾಯತ ಧರ್ಮ ಜಾಗೃತಿ ಸಮವೇಶದ ರ್‍ಯಾಲಿಯ ನಂತರ ಧಾರವಾಡ ಜಿಲ್ಲದಿ ದರ್ಪಣ್ ಜೈನ್‌ರವರಿಗೆ ಮುಖ್ಯಮಂತ್ರಿಗಳಿಗೆ ಸಲ್ಲಿಸಬೇಕಾದ ಮನವಿ ಸಲ್ಲಿಸುತ್ತಿರುವುದು



ಪೂಜ್ಯ ಬಸವ ಜಯ ಮೃತ್ಯುಂಜಯ ಸ್ವಾಮೀಜಿಯವರಿಂದ ಆರ್ಶೀವಚನ

Kalyana Kirana …ada Monthly Jan 2011 RNI No.1998…70, CPMG/KA/BGW … P(W)-… Pages
Rs.10.00, Posted at Bangalore GPO on 3,10,20 of Every Month



ಜಗದ್ಗುರು ಚನ್ನಬಸವಾನಂದ ಸ್ವಾಮೀಜಿಯವರು ಸನ್ಮಾನ್ಯ ರಾಷ್ಟ್ರಪತಿ ಪ್ರತಿಭಾ ಪಾಟೀಲ ರನ್ನು ಭೇಟಿ ಮಾಡಿ ಮಾತು ಕತೆ ನಡೆಸಿದರು